Sri C. M. ARUMUGHAM.—I am not bothered about the scriptures. Is it not a fact that animal sacrifices are made to God. If that is the case, would not people take liquor at the time of making sacrifice. Muslims are a section of the people. Do Muslims take liquor for worship? They do not. How can the Congress Government say that they exempt liquor for sacramental purposes. Religion is purely personal. The law of the country should not interfere with the religion of a person, because it is private. How can you exempt for one person a thing which binds all other persons? Do you call it a secular State ?

3-00 P.M.

Sri H. S. RUDRAPPA.—In the Constitution, it is a Secular State.

Sri C. M. ARUMUGHAM.—I have said in the begining that you are providing money under Muzrai for the safeguarding of Hindu Temples. and that in the name of the country. you are providing money for the construction of Hindu Temples...

Sri C. J. MUCKANNAPPA—Even the Muslims mosque come under the Muzrai institutions.

Sri M. MALLIKARJUNA SWAMY.—My friend must understand that a Secular State does not mean an irreligious State.

(Interruption)

Sri C. M. ARUMUGHAM.—My friend Mr. Kothawale should know that there is a temple at Urthanahalli in Kolar District, where the Government has provided a sum of two thousand rupees for the temple. Why should you pay the revenues of the public exchequer for a temple? If the people are interested, people must pay and not Goverument money. Can you do it? Can a law exempt a certain section of the people in the name of religion? Suppose my religion says that I must drink every day, do you permit me? Suppose my religion says that the entire family should drink, do you permit? Suppose we have taken an oath that we should drink all the 365 days in the year, do you permit?

Mr. SPEAKER.—He has taken more time. He may please conclude early.

Sri C. M. ARUMUGHAM.—Sir, this is a mad law that they are getting passed. It is not going to benefit the people and it is not going to improve public health in any way.

Mr. SPEAKER.--The House now rises and will meet after half-an-hour.

The House adjourned for recess at Seven Minutes past Three of the Clock and reassembled at Forty Minutes past Three of the Clock.

[Mr. SPEAKER in the Chair.]

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).---ಸ್ವಾಮಿ, ಮೈಸೂರು ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಕಾಂಗ್ರೆಸ್ ಪಕ್ಷದವರು ಅಧಿಕಾರಕ್ಕೆ ಬಂದಾಗಿನಿಂದಲೂ ಅಂದರೆ ಅಧಿಕಾರಕ್ಕೆ ಬಂದ ತಾರೀಖಿನಿಂದಲೂ ಪ್ರಯತ್ನ ಮಾಡುತ್ತಲೇ ಇದ್ದಾರೆ. ಇದನ್ನು ನೋಡಿದರೆ ನನಗಾದರೂ ಅನಿಸುತ್ತದೆ. ಹೀಗೆ ಇದನ್ನು ಕನಸಿನಲ್ಲಿ ಕನವರಿಸುತ್ತಿರುವ ಈ ಕಂದಮ್ಮಗಳು ಎಷ್ಟರಮಟ್ಟಿಗೆ ಇದರಲ್ಲಿ ಇವರು ಜಯಪ್ರದ ಹೊಂದುತ್ತಾರೆ, ಇದರಿಂದ ಎಷ್ಟರಮಟ್ಟಿಗೆ ಲೋಕ ಕಲ್ಯಾಣವಾಗುತ್ತದೆ, ಇದರಿಂದ ಎಷ್ಟರಮಟ್ಟಿಗೆ ದೀನದಲಿತರ ಸುಖಸಂಪತ್ತುಗಳು ಅಭಿವೃದ್ಧಿ ಹೊಂದುತ್ತವೆಂಬುದನ್ನು ಆಲೋಚನೆ ಮಾಡಿ ನೋಡಿದರೆ ಇದು ಆ ಮರಳುಕಾಡಿನಲ್ಲಿ ನೀರನ್ನು ಹುಡುಕಿಕೊಂಡು ಹೋದಂತಾಗಿರುವುದೇ ಅಲ್ಲದೆ, ಶ್ರೀ ವಾರ್ಣ ವೀರೇಂದ್ರ ಪಾಟೀಲವರು ಈ ದಿವಸ ಪಾನನಿರೋಧವನ್ನು ಈ ಒಂದು ಶಾಸನದ ಮೂಲಕ ದೇಶದಲ್ಲಿ ಜಾರಿಗೆ ತಂದು ಇದರ ಪರಿಣಾಮವಾಗಿ ದೇಶದಲ್ಲಿರತಕ್ಕ ದುಷ್ಟ ಶಕ್ತಿಗಳನ್ನೆಲ್ಲ ಜನತೆಯಿಂದ ದೂರ ಮಾಡಿ ಅವರು ಇದರಲ್ಲಿ ಜಯಪ್ರದ ಹೊಂದುತ್ತೇವೆಂದು ಭಾವಿಸಿದ್ದರೆ ಅದು ಅವರ ಒಂದು ಕನಸೇವಿನಾ ಮತ್ತೆ ಬೇರೆ ಏನೂ ಇಲ್ಲವೆಂದು ನನಗೆ ಅನಿಸುತ್ತದೆ.

ಸ್ವಾಮಿ, ಈ ದಿವಸ ಈ ಮದ್ಯಪಾನವನ್ನು ನಿರೋಧ ಮಾಡಿ ಕುಡುಕರನ್ನು ಶಿಕ್ಷೆಗೊಳಗು ಮಾಡಿ, ಮತ್ತೆ ಕೆಲವು ಮಂದಿ ಕುಡಿಯುತಕ್ಕವನಿಗೆ ಪರ್ಮಿಟ್‌ಗಳನ್ನು ಕೊಟ್ಟು ಇದರಲ್ಲಿ ಜಯಪ್ರದ ಹೊಂದುತ್ತೇವೆಂದು ಹೇಳಿಕೊಳ್ಳುತ್ತ ಇಲ್ಲಿಗೆ ಹದಿನಾಲ್ಕು ವರ್ಷಗಳಿಂದಲೂ ರಾಜ್ಯಭಾರ ಮಾಡುತ್ತಿರುವ ಈ ಕಾಂಗ್ರೆಸ್ ಜನರು ಈ ದಿವಸ ಇವರು ಈ ರಾಜ್ಯಭಾರವನ್ನು ಯಾರ ಒಂದು ಆಶೀರ್ವಾದ ಬಲದಮೇಲೆ ಮಾಡುತ್ತಿದ್ದಾರೋ ಅಂಥ ಆ ಪಿತಾಮಹನನ್ನು ಮತ್ತು ಆತನು ಹಾಕಿಕೊಟ್ಟ ದಾರಿಯನ್ನೂ ಸಂಪೂರ್ಣವಾಗಿ ಮರೆತು ಈಗ ಈ ಕುಡಿತವನ್ನು ಕಾನೂನು ಮೂಲಕ ಜಾರಿಗೆ ತರುತ್ತೇವೆಂದು ಹೇಳುತ್ತಿರುವುದನ್ನು ನೋಡಿದರೆ ಇವರಿಗಿಂತಲೂ ದಡ್ಡರೂ ಬುದ್ಧಿಶೂನ್ಯರೂ ಮತ್ತು ಅವಿವೇಕಿಗಳೂ ಬೇರೆಯಾರು ಇಲ್ಲವೆಂದೇ ಹೇಳಬೇಕಾಗಿದೆ. ಈ ದಿವಸ ಈ ಅಧಿಕಾರದಲ್ಲಿರತಕ್ಕ ಈ ಜನರು ಹೇಳುತ್ತಿರುವುದನ್ನು ನೋಡಿದರೆ ಒಂದುಕಡೆ ಕುಡಿತವನ್ನು ದೇಶದಲ್ಲ ಸಂಪೂರ್ಣವಾಗಿ ತಪ್ಪಿಸಿ ಬಡವರ ಕಲ್ಯಾಣ ಮಾಡಲು ಈ ಕಾನೂನನ್ನು ಜಾರಿಗೆ ತರಲಾಗುತ್ತದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವರಾಗಿ ಯಾರು ಮೊದಲು ಈ ಪಾನನಿರೋಧ ಚಳುವಳಿಯನ್ನು ಹೂಡಿದರೋ ಅಂಥ ಪೂಜ್ಯಪಿತಾಮಹನ ಹೆಸರನ್ನು ಹೇಳಿಕೊಂಡು ಆ ದಿವಸ ರಾಜ್ಯಭಾರ ಮಾಡುತ್ತಿರುವ ಜನರು ಅಧಿಕಾರದಾಹಕ್ಕೆ ಸಿಕ್ಕಿ ಇವರು ತಮ್ಮ ತಮ್ಮಲ್ಲೇ ಜಗಳವನ್ನು ಮಾಡಿಕೊಳ್ಳುತ್ತಿರುವುದನ್ನು ಕೈ ಬಿಟ್ಟು ಇವರು ಈ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ, ಇದರಲ್ಲಿ ಜಯಪ್ರದಗಳಿಸಿದ್ದಿದ್ದರೆ ನಿಜವಾಗಿಯೂ ಇವರಿಗೆ ಕೀರ್ತಿ ದೊರೆಯುತ್ತಿತ್ತು. ಆದರೆ ಇತ್ತ ಕಡೆಗೆ ಸಾಕಷ್ಟು ಗಮನ ಕೊಡದೆ ಮನಸ್ಸಿಗೆ ಬಂದ ಹಾಗೆಲ್ಲ ಕಾನೂನುಗಳನ್ನು ಮಾಡುತ್ತ, ಇವರು ಈ ದಿವಸ ಯಾರ ಕೃಪಾಶಯದಲ್ಲಿ ರಾಜ್ಯಭಾರ ಮಾಡುತ್ತಿದ್ದಾರೋ ಅಂಥವರು ಹೇಳಿಕೊಟ್ಟ ಪಾಠ—ನೀತಿ ಮಾರ್ಗಗಳನ್ನೆಲ್ಲಾ ಮರೆತು ಇದೊಂದು ನಾಗರೀಕ ಸರ್ಕಾರವೆಂದು ಹೇಳಿಕೊಳ್ಳುತ್ತ ಆ ನೆಪದಲ್ಲಿ ಅಲ್ಲದ-ಸಲ್ಲದ ಕಾನೂನುಗಳನ್ನು ಶಾಸನ ಕಡತಕ್ಕೇರಿಸುವ ನೆಪದಲ್ಲಿ ಜನರನ್ನು ಶಿಕ್ಷಾರ್ಹರನ್ನಾಗಿ ಮಾಡಿ, ತನ್ಮೂಲಕ ಜನರನ್ನು ಪಶುಗಳಂತೆ ಕಾಣಲು ಹೊರಟಿರುವ ಈ ಜನರಿಗೆ ಈ ಹಿಂದೆ ಆ ಮಹಾತ್ಮಗಂಧೀಜಿಯವರು ಹೇಳಿಕೊಟ್ಟ ಪಾಠಗಳು-ಕಲಿಸಿದ ನೀತಿ ಎಲ್ಲಾ ಎಲ್ಲಿ ಹೋದವು! ಮಹಾತ್ಮಾ ಗಾಂಧಿಯವರ ನೀತಿಗನುಸಾರವಾಗಿ ಈ ಆಡಳಿತ ಪಕ್ಷದವರು ಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತಂದಿದ್ದಾರೆ-ಇದರಿಂದ ದೇಶಕ್ಕೆ ಕಲ್ಯಾಣವನ್ನುಂಟು ಮಾಡಿದರೆ ಕಾಂಗ್ರೆಸ್ಸಿನವರನ್ನು ನಾನು ಈ ದಿವಸ ಬಹಳವಾಗಿ ಹೊಗಳುತ್ತಿದೆ. ಹಾಗೂ ಸಂತೋಷ ಪಡುತ್ತಿದೆ. ಇದರಿಂದ ಅವರಿಗೂ ಇದರಿಂದ ಕೀರ್ತಿ ಬರುತ್ತಿತ್ತು. ಆದರೆ ಈವರೆಗೆ ಅವರೇನೂ ಅಂಥದನ್ನು ಮಾಡಿಲ್ಲ. ಈ ವಿಚಾರ ಕಾಂಗ್ರೆಸ್ ಮಂತ್ರಿಗಳಿಗೂ ಗೊತ್ತು, ಈ ಸಭಾಸದಸ್ಯರಿಗೂ ಗೊತ್ತು ಮತ್ತು ದೇಶದಲ್ಲಿರತಕ್ಕ ಜನರಿಗೂ ಗೊತ್ತಿದೆ. ತಾವು ಹೇಗಾದರೂ ಮಾಡಿ ಅಧಿಕಾರದಲ್ಲಿ ಕಚ್ಚಿಕೊಂಡಿರುವಹಾಗೆ ಮಾಡಿಕೊಳ್ಳೋಣವೆಂಬ ಉದ್ದೇಶದಿಂದ ದೇಶದಲ್ಲಿ ಬಲವಂತರನ್ನು—ಮತ್ತಷ್ಟು ಬಲವಂತರನ್ನಾಗಿಯೂ ಶ್ರೀಮಂತರನ್ನು-ಮತ್ತಷ್ಟು ಶ್ರೀಮಂತರನ್ನಾಗಿಯೂ ಮಾಡತಕ್ಕ ಹಾದಿಯಲ್ಲಿ ಹೋಗುತ್ತಿರುವ ಈ ಅಧಿಕಾರ ಪಕ್ಷ ಈ ತಪ್ಪು ಹಾದಿಯನ್ನು ಬಿಟ್ಟು ಇವರು ಆ ಮಹಾತ್ಮ ಗಾಂಧಿಯವರು ಹೇಳಿಕೊಟ್ಟ ಶಾಂತಿ ಮಾರ್ಗದಲ್ಲಿ—ಗೌರವ ಮಾರ್ಗದಲ್ಲಿ ಈ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೊರಟಿದ್ದರೆ ಇದರಿಂದ ದೇಶಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗಿದ್ದರೂ ಹಾಗೂ ದೇಶದ ಅಭಿವೃದ್ಧಿ ಕಾರ್ಯಗಳು ಎಷ್ಟೇ ಕುಂಠಿತನಾಗಿದ್ದರೂ ಪರವಾಇಲ್ಲವೆಂದು ನಾನು ಹೇಳುತ್ತಿದೆ. ಆದರೆ ಇವರಲ್ಲಿ ಅಂಥ ಒಂದು ತತ್ವವಾಗಲೀ—ನೀತಿಯಾಗಲೀ ಇಲ್ಲ. ಆದ್ದರಿಂದ ಇವರು ಈ ದಿವಸ ರಾಜ್ಯಭಾರ ಮಾಡುವುದಕ್ಕೆ ಅರ್ಹರಾಗಿದ್ದಾರೇ ಎಂದು ಕೇಳುತ್ತೇನೆ! ಈ ದಿವಸ ಅಧಿಕಾರವನ್ನು ಕೈಲಿಟ್ಟುಕೊಂಡು ಈ ಜನರು ಈ ಒಂದು ಸೋಗಿನಲ್ಲಿ ತಮಗೆಲ್ಲಿ ಬೇಡವೋ ಅಲ್ಲಿ ಇದನ್ನು ಜಾರಿಗೆ ತರದೆ, ಎಲ್ಲಿ ತಮಗೆ ಅನಾನುಕೂಲವೋ ಅಲ್ಲಿಗೆ ಮಾತ್ರ ಇದನ್ನು ಜಾರಿಗೆ ತರಬೇಕೆಂದು ಈ ಅರ್ಧನಾರಿ ತತ್ವವನ್ನು ಈ ಶಿಕಂಡಿ ತತ್ವವನ್ನು ಜನರು ಎಷ್ಟರ ಮಟ್ಟಿಗೆ ಒಪ್ಪುತ್ತಾರೋ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅದು ನನಗೆ ತಿಳಿಯದು! ಈ ದಿವಸ ತುಮಕೂರು ಜಿಲ್ಲೆಗೆ ಸೇರಿದ ಆ ನಂದೀ ಹಳ್ಳಿಯಲ್ಲಿ ಯಾರಾದರೂ ಒಬ್ಬ ಮದ್ಯಪಾನ ಮಾಡಿದರೆ ಆತನನ್ನು ಹಿಡಿದುಕೊಂಡು ಹೋಗಿ ನ್ಯಾಯಾಲಯದ ಮುಂದೆ ನಿಲ್ಲಿಸಿ ಆತನಿಗೆ ಶಿಕ್ಷೆ ಕೊಡಿಸಿದರೆ, ಅದೇ ಮನುಷ್ಯ ಈ ಬೆಂಗಳೂರಿಗೆ ಬಂದು ಇಲ್ಲಿ ಪಾನಮಾಡಿ ಮತ್ತು ಹೊಂದಿ ಅಲ್ಲೇ ಉರುಳಾಡಿದರೂ ಆತನಿಗೆ ಇಲ್ಲಿ ಯಾವ ಶಿಕ್ಷೆಯೂ ಇಲ್ಲ, ಈ ದಿವಸ ಬೆಂಗಳೂರಲ್ಲಿ ಈ ಪಾನನಿರೋಧವನ್ನು ಜಾರಿಗೆ ತರದೆ ಆ ಗುಲ್ಬರ್ಗ ಜಿಲ್ಲೆಯಲ್ಲಿ ಜಾರಿಗೆ ತರದೆ ಬೇರೆಕಡೆಗಳಲ್ಲಿ ಜಾರಿಗೆ ತರಲು ಕಾರಣವೇನು ? ಸರ್ಕಾರಕ್ಕೆ 2 ಮತ್ತು 3ನೇ ಪಾಂಚವಾರ್ಷಿಕ ಯೋಜನೆಗೆ ದುಡ್ಡು ಕಾಸು ಬೇಕೆಂಬ ನೆಪದಲ್ಲಿ ಕೆಲವು ಕಡೆ ಪಾನನಿರೋಧವನ್ನು ಜಾರಿಗೆ ತಂದು ಮತ್ತೆ ಕೆಲವು ಕಡೆ ಜಾರಿಗೆ ತಾರದೆ, ಜಾರಿಗೆ ತಂದಿರುವ ಕಡೆಗಳಲ್ಲೆಲ್ಲಾ ಇಲಿಸಿಟ್ ಲಿಕ್ಕರಿಗೆ ಸಂಪೂರ್ಣ ಅವಕಾಶ ಕೊಟ್ಟಿರುವಾಗ ಈದಿವಸ ಇದನ್ನು ಒಂದು ಶಿಕ್ಷಾರ್ಹವಾದ ಶಾಸನದ ಮೂಲಕ ಜಾರಿಗೆ ತಂದರೆ ಇವರು ಮುಂದಿನ ಪೀಳಿಗೆಯನ್ನು ಏನು ಮಾಡಬೇಕೆಂದಿದ್ದಾರೆ? ಈ ದಿವಸ ಮಹಾತ್ಮಗಾಂಧಿ ಹೆಸರಿನಲ್ಲಿ ರಾಜ್ಯಭಾರ ನಡೆಸುತ್ತಿರುವ ಕಾಂಗ್ರೆಸ್ ಮಂತ್ರಿಮಂಡಲಿ ಜನರಿಗೇನು ಹಿತವನ್ನುಂಟು ಮಾಡಿದೆಯೆಂಬುದನ್ನು ಗಮನಿಸಬೇಕು. ದೇಶಾಭ್ಯುದಯವನ್ನು ಕುಂಠಿತಗೊಳಿಸುವ ಇಂಥ ಮಸೂದೆಯನ್ನು ತಂದು ಇದಕ್ಕೆ ಒಪ್ಪಿಗೆ ಕೊಡಿ ಎಂದು ಕೇಳುತ್ತಿರುವುದು ನಿಜವಾಗಿಯೂ ಇದು ದ್ರೋಹವಲ್ಲದೆ ಮತ್ತೆ ಬೇರೆ ಅಲ್ಲ. ಜವಾಬ್ದಾರಿ ಸರ್ಕಾರ ಎಂದು ಹೇಳಿಕೊಳ್ಳುವವರು, ಜನರ ಹಿತ, ದೇಶದ ಹಿತ ರಕ್ಷಣೆ ಮಾಡುವುದಾಗಿ ಹೇಳಿಕೊಳ್ಳುವವರು ಈ ದಿವಸವೇಕೆ ಗುಲ್ಬರ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿಲ್ಲ ? ಈ ದಿವಸ ಇಂಥ ಮಸೂದೆ ತಂದು ದೇಶಕ್ಕೆ ಅನ್ಯಾಯವೆ ಸಿಗುತ್ತಿರುವುದು ರಾಷ್ಟ್ರದ ಹಿತಕ್ಕೆ ಧಕ್ಕೆ ತರುತ್ತಿರುವುದು ನಿಜವಾಗಿಯೂ ಕೂಡ ನಾಚಿಕೆಗೇಡಿನ ಕೆಲಸ. ಇದಕ್ಕಾಗಿ ಸರ್ಕಾರದವರು ತಲೆ ತಗ್ಗಿಸ ಬೇಕಾಗಿದೆ. ಸರ್ಕಾರ ಈ ದಿವಸ ಯಾವ ತತ್ವಗಳಿಗನುಸಾರವಾಗಿ ಕೆಲಸ ಮಾಡುತ್ತಿದೆ ಅದನ್ನು ಜಾರಿಗೆ ತಂದಿದೆಯೋ ಎಂದು ನೋಡುವುದಾದರೆ ಕುಡಿತ ನಿಲ್ಲಿಸಲು ತೊಡಗಿರುವಾಗ ಕಳ್ಳಬಟ್ಟಿ ತಯಾರಿ ಹೆಚ್ಚುತ್ತಿದೆ, ಕುಡಿಯುವವರ ಸಂಖ್ಯೆ ಹೆಚ್ಚುತ್ತಿದೆ. ಈ ವಿಚಾರದಲ್ಲಿ ಬುದ್ಧಿವಂತಿಕೆಯಿಂದ, ಜಾಗರೂಕತೆಯಿಂದ ಕಾರ್ಯ ನಿರ್ವಹಿಸಿಲ್ಲ.

ಮೊನ್ನೆ ಪೋಲೀಸ್ ಖಾತೆವಹಿಸಿಕೊಂಡ ಶ್ರೀ ಮಾರ್ಕ ಚನ್ನಬಸಪ್ಪನವರು ನಾಟಕವಾಡುತ್ತಿರುವುದನ್ನು ನೋಡಿದರೆ ದೇಶದಲ್ಲಿ ಮಾದಕ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗಳು ಎಷ್ಟು ಜಾಸ್ತಿಯಾಗಿವೆಯೆಂಬುದು ಅರ್ಥವಾಗುತ್ತದೆ. ಈ ಬಗ್ಗೆ ಪ್ರದರ್ಶನಗಳು ದೇಶದ ಎಲ್ಲಾ ಕಡೆಯೂ ಆಯಿತು, ಮೊನ್ನೆ ಮೊನ್ನೆ ಹುಬ್ಬಳ್ಳಿ, ಮೈಸೂರು ಮುಂತಾದ ಕಡೆಗಳಲ್ಲೆಲ್ಲಾ ನಡೆಯಿತು. ಬೆಳಗಾದರೆ ಯಾವ ಪತ್ರಿಕೆ ನೋಡಿದರೂ ಪಾನನಿರೋಧ ಸಂಬಂಧದಲ್ಲಿ ಧಾಳಿ ನಡೆಯಿತು ಮಡಕೆ, ಕುಡಿಕೆ, ಕಳ್ಳಬಟ್ಟಿ ತಯಾರಿಕೆ ವಸ್ತುಗಳ ಪತ್ತೆಯಾಯಿತು ಎಂಬ ಸುದ್ದಿ ! ಇಕ್ಷಫ ಮೆರ್ಲೀಪರ್ಟ ಇಲಾಖೆಯವರನ್ನು ಧಾಳಿ ನಡೆಸುವ ಸ್ಥಳಗಳಿಗೆ ಕರೆದುಕೊಂಡು ಹೋಗಿ ಫೋಟೋಗಳನ್ನು ತಗೆಸಿ ಪತ್ರಿಕೆಯವರಿಗೆ ಹಂಚಿಸಿ ಜನರಿಗೆಲ್ಲಾ ತಿಳಿಯುವಂತೆ ಮಾಡಿದರು. ಪಾನನಿರೋಧದಿಂದ ಒಂದು ಕಡೆ ದೇಶದ ವರಮಾನ ಕಡಮೆಯಾಯಿತು, ಇನ್ನೊಂದುಕಡೆ ಕಳ್ಳಬಟ್ಟಿ ತಯಾರಿಕೆ ಜಾಸ್ತಿಯಾಯಿತು. ಇಂಥಾದ್ದಕ್ಕೆಲ್ಲಾ ಅವಕಾಶಮಾಡಿ ಕೊಟ್ಟವರು ನಾಳೆ 1962 ನೆಯ ಜನವರಿ ಫೆಬ್ರುವರಿಯಲ್ಲಿ ನಡೆಯುವ ಚುನಾವಣೆಗೆ ಜನತೆಯ ಬಳಿ ಹೋಗಿ ಹೇಗೆ ಓಟು ಕೇಳುತ್ತಾರೋ ತಿಳಿಯದು ! ಇದರ ಪರಿಣಾಮ ಜನರ ಮನಸ್ಸಿನ ಮೇಲಾಗುವುದಿಲ್ಲವೆ ? ಈ ರೀತಿ ಆಡಳಿತ ನಡೆಸುತ್ತಿರುವವರು ಮತ್ತೆ ಹೇಗೆ ಅಧಿಕಾರಕ್ಕೆ ಬರುವರೋ ತಿಳಿಯದು. ಈ ದಿವಸ ನಾವು ಹೇಳಿದಂತೆ ಕೇಳಿ ನಮ್ಮೊಂದಿಗೆ ಸಹಕರಿಸಿದರೆ ಪಾನನಿರೋಧ ಜಯಪ್ರದವಾಗುತ್ತದೆಯೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ನಾನಾದರೂ ಹೇಳುತ್ತೇನೆ. ಮಹಾತ್ಮಗಾಂಧೀಜಿಯವರು

ದೇಶದಲ್ಲಿ ರಚನಾತ್ಮಕ ಕಾರ್ಯ ನಡೆಯಬೇಕು. ಜನತೆಯನ್ನು ಒಲಿಸಿಕೊಳ್ಳಬೇಕು. ಅವರ ಪ್ರೀತಿ ವಿಶ್ವಾಸಗಳಿಸಬೇಕು. ಎಂದು ಹೇಳಿದರೆ ಈಗ ಅನೇಕವಾದ ಕಾನೂನುಗಳನ್ನು ಮಾಡಿ ಜನತೆಗೆ ತೊಂದರೆ ಕೊಡುತ್ತಿರುವುದು ಸರ್ವಥಾ ನ್ಯಾಯವಲ್ಲ, ಧರ್ಮವಲ್ಲ. ನಿಜವಾಗಿಯೂ ಇಂಥ ಕಾನೂನನ್ನು ತಂದು ನಮ್ಮ ಮುಂದಿಟ್ಟು ಒಪ್ಪಿಗೆ ಕೇಳುತ್ತಿರುವುದು ದುರ್ದೈವ ಇದು ದೇಶದ್ರೋಹಕರವಾದ ಕೆಲಸವೆಂದು ಹೇಳಿದರೆ ತಪ್ಪಾಗುವುದಿಲ್ಲ.

ಸರ್ಕಾರ ಇಂಥ ಕಾನೂನು ತಂದಿರುವುದನ್ನು ನೋಡಿದರೆ ಬುದ್ಧಿವಂತಿಕೆಯ ಸೂಚನೆಯಲ್ಲವೆಂದು ಶ್ರೀ ಅಮರ್ಗರವರು ಹೇಳಿದರು. ಶ್ರೀ ವೀರೇಂದ್ರ ಪಾಟೀಲರು ದೀಪಾವಳಿ ಅಳಿಯ ಇದ್ದಹಾಗೆ, ಮಂತ್ರಿಮಂಡಲ ದೀಪಾವಳಿ ಸಮಯದಲ್ಲಿ ಮಾವನ ಮನೆಗೆ ಅಳಿಯಂದಿರೋಪಾದಿಯಲ್ಲಿ ಹೋದಹಾಗೆ ಎಂದು ಈ ಕಾನೂನು ನೋಡಿದರೆ ಭಾಸವಾಗುತ್ತದೆ. ಶ್ರೀಮಂತರ ಮನೆಯಲ್ಲಿ ಮದುವೆಯಾದ ಬುದ್ಧಿಇಲ್ಲದಿರುವ ಅಳಿಯ ದೀಪಾವಳಿಯಲ್ಲಿ ಮಾವನ ಮನೆಗೆ ಹೋಗಬೇಕಾಗಿ ಬಂತು. ಮಾವನ ಮನೆಯವರೆಲ್ಲಾ ವಿದ್ಯಾವಂತರಾಗಿದ್ದುದರಿಂದ ಮರ್ಯಾದೆ ಹೋಗುವ ಪ್ರಸಂಗ ಬರುತ್ತದೆಂದು ಹುಡುಗನ ತಂದೆ ಯೋಚಿಸಿ ತನ್ನ ಮಗನಿಗೆ ಯಾವ ಪುಸ್ತಕವನ್ನು ಮಾವನ ಮನೆಯಲ್ಲಿ ಭಾವಮೈದನಂದಿರಾಗಲಿ, ನಾದಿನಿಯರಾಗಲಿ ಕೊಟ್ಟರೂ ಮೊದಲಿನಿಂದ ಕೊನೆಯವರಿಗೂ ತಿರುವಿಹಾಕಿ ಅದು ಪೂರ್ತಿಯಾಯಿತು, ಚೆನ್ನಾಗಿದೆ ಎಂದು ಹೇಳುವಂತೆ ತಿಳಿಸಿದರು. ಅದೇ ರೀತಿ ಅಳಿಯ ಮಾಡಿದ್ದ ಆಗ ಮಿಸ್ಕಿವಸ್ ನಾದಿನಿಯೊಬ್ಬಳು ಒಂದು ಖಾಲಿ ಪುಸ್ತಕವನ್ನು ಭಾವನಿಗೆ ಕೊಟ್ಟಳು. ಅದನ್ನೂ ಕೂಡ ಅಳಿಯ ಮೊದಲಿಂದ ಕೊನೆಯವರೆಗೆ ತಿರುವಿಹಾಕಿ ತನ್ನ ತಂದೆ ಹೇಳಿದ್ದಂತೆ ಜವಾಬು ಹೇಳಿದ, ಈ ಮಂತ್ರಿ ಮಂಡಲದವರು ಈ ರೀತಿ ದೀಪಾವಳಿ ಅಳಿಯಂದಿರಂತಿದ್ದಾರೆ. ಈ ಕಾನೂನಿನಲ್ಲೇನು ದೋಷವಿದೆಯೆಂದು ನೋಡಿ ಅದನ್ನು ಸರಿಪಡಿಸಿ ಸಭೆಯ ಮುಂದಿಡದೆ ಕಾರ್ಯದರ್ಶಿಗಳು ಕೊಟ್ಟ ಪುಸ್ತಕವನ್ನು ನೋಡದೆ ಒಪ್ಪಿಕೊಂಡು ನಮ್ಮ ಮುಂದಿಟ್ಟಿರುವುದನ್ನು ನೋಡಿದರೆ ಇದಕ್ಕೇನು ಹೇಳಬೇಕೋ ತಿಳಿಯದು. ಇನ್ನೊಂದು ಗೋವಿನ ಪ್ರಸಂಗ ಚಿಕ್ಕವಯಸ್ಸಿನ ಮಂತ್ರಿಗಳ ಕೈಲಿ ಈ ಮಸೂದೆಯನ್ನು ಮಂಡಿಸಿ ಮಂತ್ರಿಮಂಡಳದವರು ಗೈರು ಹಾಜರಾಗಿರುವುದು. ಇದನ್ನು ನೋಡಿದರೆ ವಿರಾಟನ ಗೋವುಗಳನ್ನು ಕೌರವರು ಹಿಡಿದುದು ಜ್ಞಾಪಕಕ್ಕೆ ಬರುತ್ತದೆ. ಪಂಡಿತ ನೆಹರೂರವರು, ಈ ದೇಶದ ಮುಖ್ಯಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರಾದ ಸಂಜೀವ ರೆಡ್ಡಿಯವರು ಮುಂತಾದ ಕಾಂಗ್ರೆಸ್ ಧುರೀಣರೆಲ್ಲಾ ಇದ್ದಾರೆ. 1954ರಲ್ಲಿ ಪ್ಲಾನಿಂಗ್ ಕಮಿಷನ್ ಸದಸ್ಯರಾದ ಶ್ರೀಮನ್ನಾರಾಯಣ್‌ರವರು ಪಾನನಿರೋಧದ ಬಗ್ಗೆ ಒಂದು ದಾರಿ ತೋರಿದರು. ಆದರೆ ಅದೆಷ್ಟು ಜಯಪ್ರದವಾಗಿದೆ, ಯಾವರೀತಿ ಜಾರಿಗೆ ತರುತ್ತಿದ್ದಾರೆ ಎಂದು ನೋಡಿದರೆ ವ್ಯಸನವಾಗುತ್ತದೆ.

4-00 P. M.

ಸ್ವಾಮಿ, ಮೈಸೂರಿನಲ್ಲಿ ಗಲಾಟೆಯಾಯಿತು, ಅಲ್ಲಿ vested interests ಇದ್ದರೆಂದು ಇಲ್ಲಿಗೆ shift ಮಾಡಿದರು. ಎಲ್ಲಿ ಪಾನನಿರೋಧ ಜಾರಿಮಾಡಿದರೊ, ಎಲ್ಲಿ ಹೆಂಡ ತೆಗೆಯಬಾರದೋ ಅಲ್ಲಿ ಹೆಂಡ ತೆಗೆದು ಆಲೂರಿನಿಂದ ಇಲ್ಲಿಗೆ ಅದನ್ನು ತಂದು ಅದರಿಂದ ದುಡ್ಡನ್ನು ಗಳಿಸುವುದಕ್ಕೆ ಈ ಸರ್ಕಾರಕ್ಕೇನು ಅಧಿಕಾರವಿದೆ? ಮದ್ಯಪಾನ ಮಾಡುವುದು ನಿಷೇಧವೆಂದು ತಿಳಿದಿದ್ದವರೂ ಕೂಡ ಈಗ ಮದ್ಯಪಾನ ಮಾಡುವುದಕ್ಕೆ ಪ್ರಾರಂಭ ಮಾಡಿರುವುದಕ್ಕೆ ಯಾರು ಕಾರಣರೆಂಬುದನ್ನು ಯೋಚನೆಮಾಡಬೇಕು. ಈ ಸರ್ಕಾರದವರು ಮಾಡಿರುವ ಕಾನೂನುಗಳಿಂದ ರೊಚ್ಚಿಗೆದ್ದು, ಇವರ ಕಾನೂನುಗಳಿಗೆ ಪ್ರತಿಕಾನೂನುಗಳನ್ನು ಮಾಡಿಕೊಂಡು, ಇವರು ಚಾಪೆಯ ಕೆಳಗೆ ತೂರಿದರೆ ಅವರು ರಂಗೋಲೆ ಕೆಳಗೆ ತೂರುತ್ತಾರೆ, ರಾಷ್ಟ್ರಪಿತನ ಆತ್ಮಕ್ಕೆ ಶಾಂತಿ ತರುತ್ತಿದ್ದ ಉದಾತ್ತಧ್ಯೇಯವನ್ನು ಮಣ್ಣುಪಾಲು ಮಾಡಿರುವವರು ಅಧಿಕಾರದಲ್ಲಿರುವ ಸ್ನೇಹಿತರು. ಶ್ರೀ ಮಾರ್ಕ ಆರ್ಮುಗಂ ಅವರು ಹೇಳಿದ ಹಾಗೆ, ಈ ಊರಿನಲ್ಲೇಕೆ ಜನರಿಗೆ ಹೆಂಡ ಕುಡಿಸುತ್ತಾರೆ?

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ನಂದಿಹಳ್ಳಿಯ ಹತ್ತಿರ ಒಂದು ಮೈಲಿ ಕಲ್ಲಿದೆ; ಅದರಿಂದಾಚೆ ಕುಡಿದರೆ ಪೋಲೀಸಿನವನು ಹಿಡಿದು ಕೊಳ್ಳುತ್ತಾನೆ, ಈಚೆ ಕುಡಿದರೆ ಹಿಡಿಯುವುದಿಲ್ಲ! ಹೀಗೆ ಒಂದು ಕಡೆ ಹೆಂಡ ಕುಡಿಯಿರಿ ಎಂದು ಹೇಳಿ ಇನ್ನೊಂದು ಕಡೆ ಕುಡಿಯಬಾರದು ಎಂದು ಹೇಳಲು ಏನು ಅಧಿಕಾರವಿದೆ? ಇದು ಯಾವ ನ್ಯಾಯ? ದೇಶದಲ್ಲಿ ಪ್ರಜೆಗಳೆಲ್ಲರೂ ಒಂದೇ ಎಂದು ಹೇಳಿ, ಎಲ್ಲರಿಗೂ ಒಂದೇ ರೀತಿಯಾಗಿ ಈ ಕಾನೂನನ್ನು ಜಾರಿಮಾಡಿದರೆ ಅದಕ್ಕೆ ತಲೆಬಾಗಿ ಸಮರ್ಥನೆ ಕೊಡುತ್ತೇನೆ. ದೇಶದಲ್ಲಿ ಈ ಕುಡಿತದಿಂದ ಜನರು, ಅದರಲ್ಲಿಯೂ ಬಡಜನರು ಬಹಳ ಬೆಂಡಾಗಿದ್ದಾರೆ, ಇದರಿಂದ ಶ್ರೀಮಂತರು ಅವರನ್ನು ಸುಲಿಗೆಮಾಡಿದ್ದಾರೆ. ಅನೇಕ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸ ಮಾಡಿಸಲು ಅವಕಾಶವಿಲ್ಲವಾಗಿದೆ. ಹಬ್ಬಗಳಲ್ಲಿ ತಮ್ಮ ಹೆಂಡಿರು ಮಕ್ಕಳ ಮೇಲೆ ಬಟ್ಟೆಬರೆಗಳನ್ನು ಹಾಕಿಕೊಳ್ಳಲು ತರುವುದಕ್ಕೆ ಅವಕಾಶವಿಲ್ಲದಂತಾಗಿದೆ. ಈ ಸುರಾ ರಾಕ್ಷಸನ ಹಿಡಿತದಿಂದ ಜನರನ್ನು ಬಿಡಿಸುವದಕ್ಕೆ ಈಗ ಮಾಡಿರುವ ಈ ಕಾನೂನು ಏನೂ ಪ್ರಯೋಜನವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಈ ವಿಧೇಯಕದಲ್ಲಿರುವ ಕ್ಲಾಜುಗಳ ಪರಿಶೀಲನೆ ಗೋಜಿಗೆ ನಾನು ಹೋಗುವುದಿಲ್ಲ. ದೇಶದಲ್ಲಿ ವಿನೋಬ ಭಾವೆ ಭೂದಾನಕ್ಕಾಗಿ ಪಾದಯಾತ್ರೆ ಹೋಗುತ್ತಿದ್ದಾರೆ; ಮಹಾತ್ಮ ಗಾಂಧಿಯವರ ಶಿಷ್ಯರು ಬನ್ನಾಲಯವರಿದ್ದಾರೆ. ಜನರ ಅಭ್ಯುದಯಕ್ಕಾಗಿ ದುಡಿಯುತ್ತಿದ್ದಾರೆ. ನನ್ನ ಸ್ನೇಹಿತರಾದ ಕೊಥಾವಲೆಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಈ ಸಭೆಗೆ ಸದಸ್ಯರಾಗಲು ಟಿಕೆಟ್‌ಗಾಗಿ, ಮಂತ್ರಿಮಂಡಲದಲ್ಲಿ ಸ್ಥಾನಕ್ಕಾಗಿ ಏಕೆ ಅವರು ದುಡಿಯಬೇಕು? ದೇಶದಲ್ಲಿಕಟ್ಟದ್ದನ್ನು ದೂರಮಾಡಿ,ಬಡವರನ್ನು ಬಲ್ಲಿದರಾಗಿ ಮಾಡುವಪವಿತ್ರ ಕಾರ್ಯವನ್ನಾದರೂ ಅವರು ಕೈಗೊಳ್ಳಲಿ. ಪ್ರೊ. ಬನ್ನಾಲಯವರಂತೆ, ಈ ಅಸೆಂಬ್ಲಿಯನ್ನು ತ್ಯಜಿಸಿ, ಇದಕ್ಕೆ ಎಳ್ಳು ನೀರು ಬಿಟ್ಟು ಬಿಟ್ಟು ದೇಶೋದ್ಧಾರ ಕಾರ್ಯಮಾಡಿ ಎಂದು ಅವರಿಗೆ ಹೇಳುತ್ತೇನೆ. ಈಗ ಅವರು ಸಭೆಯಲ್ಲಿಲ್ಲ, ಇದ್ದಿದ್ದರೆ ಚೆನ್ನಾಗಿತ್ತು. ಕಾಂಗ್ರೆಸ್ ಭಕ್ತರು ಒಂದೊಂದು ಅಸೆಂಬ್ಲಿ ಸ್ಥಾನಕ್ಕೆ ಐದು ಹತ್ತು ಜನರು ಟಿಕೆಟ್‌ಕೇಳಿ ಪರದಾಟ ಮಾಡುತ್ತಿದ್ದಾರೆ. ಆದರೆ ದೇಶದ ಕಲ್ಯಾಣಕ್ಕಾಗಿ ಮಾಡುವ ಕೆಲಸಕ್ಕೇಕೆ ಅವರ ಪರದಾಟವಿಲ್ಲ ಎಂದು ಕೇಳುತ್ತೇನೆ. ಈ ಸಭೆಯ ಸದಸ್ಯರಾಗಿರುವ ಶ್ರೀ ಮಾರ್ಕ ತಾರೇಗೌಡರು ಇಲ್ಲೇ ಇದ್ದಾರೆ. ಬೆಳಗಿನಿಂದ ಸಾಯಂಕಾಲದ ವರೆಗೂ ಕಾನೂನುಗಳನ್ನು ಮಾಡುವ ಕಾರ್ಯದಲ್ಲಿ ನಿರತರಾಗಿರುವವರೇ ಕಾನೂನುಗಳನ್ನು ಮುರಿಯುತ್ತಿದ್ದಾರೆ. ಹೀಗಿರುವಾಗ ಅವರು ಸಾವಧಾನದಿಂದಿರುವುದು ಒಳ್ಳೆಯದೆಂದು ಅವರಿಗೆ ಹೇಳುತ್ತೇನೆ.

ಮೊನ್ನೆ ಶ್ರೀ ಮಾರ್ಕ ಜಿ. ಎಚ್. ವೀರಣ್ಣನವರು ಅವರ 'ಅಣ್ಣ ತಮ್ಮ ನಾಟಕದ' ಸುವರ್ಣ ಮಹೋತ್ಸವವನ್ನು ಮಾಡಿದರು. ಅದು ತಮ್ಮ ಅಧ್ಯಕ್ಷತೆಯಲ್ಲಿ ನೆರವೇರಿತು. ಆ ನಾಟಕವನ್ನು ತಾವೇ ಕಣ್ಣಾರೆ ನೋಡಿದಿರಿ. ಅದರಲ್ಲಿ ಮದ್ಯಪಾನ ಮಾಡಬಾರದೆಂದು ಹೇಳಿದ ಡಾಕ್ಟರು ತಾನೇ ಕುಡಿದು ಪೋಲೀಸರ ಕೈಗೆ ಸಿಕ್ಕುತ್ತಾನೆ. ಕಾಂಗ್ರೆಸ್‌ನವರನೇಕರು ಹಾಗಿದ್ದಾರೆ. ತಾವೇ ಬೇಕಾದರೆ ನನ್ನ ಜೊತೆಗೆ ಬನ್ನಿ ತೋರಿಸುತ್ತೇನೆ. ಎಷ್ಟೋಮಂದಿ ಕಾಂಗ್ರೆಸ್‌ನವರು ಕುಡಿದು, ಟೋಪಿ ಒಂದು ಕಡೆ, ವೇಸ್ಟ್ ಕೋಟ್ ಒಂದು ಕಡೆಯಾಗಿ ಬಿದ್ದಿರುತ್ತಾರೆ. ಇಂಥವರು ಜನರಬಳಿ ಹೋಗಿ ನಾವು ಹೇಳಿದಹಾಗೆಮಾಡಿ, ಆದರೆ ನಾವು ಮಾಡಿದಹಾಗೆ ಮಾಡಬೇಡಿ ಎಂದು ಹೇಳುತ್ತಾರೆ. ಹೀಗೆ ಹೇಳುವುದಕ್ಕೆ ಇವರಿಗೇನಧಿಕಾರವಿದೆ? ಕಾನೂನು ರಕ್ಷಣೆ ಮಾಡಬೇಕು: ಇಲ್ಲದಿದ್ದರೆ ಕಾನೂನನ್ನು ಜಾರಿಗೆ ತರಬಾರದು. ಮಧ್ಯಪಾನ ಹೋಗಬೇಕೆಂದು ಈ ಕಾನೂನನ್ನು ಮಾಡಿ ಯಾರ ಯಾರ ಕೈಗೆ ಏನೇನು ಅಧಿಕಾರ ಕೊಡಬೇಕೆಂದು ಹೊರಟಿದ್ದಾರೆ? ಅಧಿಕಾರವನ್ನು ಯಾರು ಚಲಾಯಿಸಬೇಕೆಂದು ಇವರ ಮನಸ್ಸಿನಲ್ಲಿದೆ? ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡವುದಕ್ಕಾಗಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಎಂದರೆ,

ಅದಕ್ಕೆ ಸರ್ಕಾರ ಒಪ್ಪಲಿಲ್ಲ. ನಿಮಿಷನಿಮಿಷಕ್ಕೆ ಹಣಕಾಸಿನ ಲೆಕ್ಕಾಚಾರ ನೋಡುವ ಅರ್ಥ ಸಚಿವರು ಈಗ ಸಭೆಯಲ್ಲಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಹೆಂಡದ ಅಂಗಡಿಗಳನ್ನು ಬಾರಾಜುಮಾಡುತ್ತಿದ್ದಾಗ ಅದರಿಂದ ಈ ದೇಶಕ್ಕೆ ಬರುತ್ತಿದ್ದ ಹಣವೆಷ್ಟು, ಈ ಹೊತ್ತು ಕಾಡುಗಳಲ್ಲಿ ಕಳ್ಳ ಭಟ್ಟಿಯಲ್ಲಿ ತಯಾರಾಗುವ ಶರಾಬು ಹೆಂಡ ಇವುಗಳ ಬೆಲೆ ಏನು ಎಂಬುದನ್ನು ಅವರು ಯೋಚನೆಮಾಡಿ ಲೆಕ್ಕಾಚಾರ ಹಾಕಿದ್ದಾರೆಯೇ? ದೇಶದ ಕಲ್ಯಾಣಕ್ಕಾಗಿ ಏನೇನು ಕೆಲಸಗಳನ್ನು ಸರ್ಕಾರದವರು ಮಾಡಬೇಕೆಂದಿದ್ದಾರೋ ಅದಕ್ಕೆ ಬರುತ್ತಿದ್ದ ಹಣ ಕೈಬಿಟ್ಟು ಹೋಯಿತು. ನಾಳೆ ಮೂರನೆಯ ಯೋಜನೆಗೆ 70 ಕೋಟಿ ರೂಪಾಯಿ ಬೇಕೆಂದು 'ಭವತಿ ಭಿಕ್ಷಾಂದೇಹಿ' ಎಂದು ಹೊರಟಿದ್ದಾರೆ. ಹಿಂದೆ ದೇಶದ ಜನರಲ್ಲಿ ಯಾರು ಕುಡಿಯಬಾರದೆಂದು ಹೇಳಿ ಕಾನೂನನ್ನು ತನ್ನಿ ಎಂದು ಹೇಳುತ್ತಿದ್ದರು. ಅದರಿಂದ ಬರುವ ವರಮಾನ ಹೋಗುತ್ತದೆಂದು ಸರ್ಕಾರ ಹೇಳಿದಾಗ ಮಿರ್ಜಾ ಸಾಹೇಬರಿಗೆ ತಿಂಗಳಿಗೆ ಐದು ಸಾವಿರ ರೂಪಾಯಿ ಸಂಬಳ ಏಕೆ, ನಾವು ಐನೂರು ರೂಪಾಯಿ ಸಂಬಳದಲ್ಲಿ ಕೆಲಸ ಮಾಡುತ್ತೇವೆಂದು ಹೇಳಿದುದನ್ನು ಯಾರೂ ಮರೆತಿಲ್ಲ. ಇವರ ಕೈಲಿ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿರಬೇಕಾದರೆ, ದೇಶದಲ್ಲಿ ಸಾವಿರ ಎರಡು ಸಾವಿರ ರೂಪಾಯಿ ಸಂಬಳ ಪಡೆಯುವ ಅಧಿಕಾರಿಗಳ ಸಂಬಳಗಳನ್ನು ಕಡಮೆ ಮಾಡಬೇಕು. ದೇಶದಲ್ಲಿ ನಿಜವಾಗಿ ಕುಡಿತ ಕಡಮೆಯಾಗಬೇಕೆಂಬ ಉದ್ದೇಶವಿದ್ದರೆ, ಪಾನನಿರೋಧ ನೀತಿಯಲ್ಲಿ ಅಭಿಮಾನವಿದ್ದರೇ ದೇಶಾದ್ಯಂತ ಹೆಂಡದ ಅಂಗಡಿಗಳನ್ನು ಮುಚ್ಚಬೇಕೆಂದು ಶ್ರೀಮಾನ್ ಜತ್ತಿಯವರಿಗೆ ಬುದ್ಧಿವಾದ ಹೇಳಬೇಕೆಂದು ಹಣಕಾಸಿನ ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನೊಂದು ವಿಚಾರ, ಈ ಕಾನೂನಿನ ಪ್ರಕಾರ ಯಾರಿಗೆ ಅಧಿಕಾರ ಕೊಡುತ್ತಿದ್ದಾರೆ? ಇದರ 6ನೇಯ ಖಂಡದಲ್ಲಿ :

> " 6(1) The State Government may invest any officer in the Police Department or any officer of any other Department with such powers etc.," ಎಂದಿದೆ.

ಇಂಥ ಕಾನೂನನ್ನೇಕೆ ಮಾಡುತ್ತಾರೆ? ಶ್ರೀಮಾನ್ ನಿಜಲಿಂಗಪ್ಪನವರಿಗೆ ಅಧಿಕಾರವಿಲ್ಲದಿದ್ದರೂ ದೇಶದ ಕೆಲಸ ಮಾಡುತ್ತಿದ್ದಾರೆ, ಕಾಂಗ್ರೆಸ್ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ಈ ಚುನಾವಣೆಯಗೊಂದಲ ಬೇಡವೆಂದು ಹೇಳುವ ಶ್ರೀಮಾನ್ ಮರಿಯಪ್ಪನವರು ದೇಶದಲ್ಲಿ ಕುಡಿತದ ಹಾವಳಿಯನ್ನು ತಪ್ಪಿಸುವುದಕ್ಕಾಗಿ, ಈ ಪವಿತ್ರವಾದ ಕೆಲಸವನ್ನು ಕೈಗೊಂಡು ಏಕೆ ಬದ್ಧಕಂಕಣರಾಗಿ ನಿಲ್ಲಬಾರದು? ಕಾನೂನಿನಲ್ಲಿ ಅಧಿಕಾರವನ್ನು ಯಾರು ಯಾರಿಗೋ ಕೊಟ್ಟು ಅವರು ಮಾಡಲಿ ಎಂದು ಹೇಳುವ ಜನರ ಉದ್ದೇಶವೇನೆಂದು ಅರ್ಥಮಾಡಿಕೊಳ್ಳಬೇಕು? ಆನರರಿ ಕೆಲಸದಲ್ಲಿರುವ ಮನುಷ್ಯರಿಗೆ ಅಧಿಕಾರವನ್ನೇಕೆ ಕೊಡುತ್ತಾರೆ? ಯಾರಿಗೆ ಅಧಿಕಾರ ಕೊಡಬೇಕೆಂದಿದ್ದಾರೆ? ಜಿಲ್ಲಾಮಟ್ಟದಲ್ಲಿರುವವರಿಗೆ, ಅಥವಾ ಸ್ಟೇಟ್ ಮಟ್ಟದಲ್ಲಿರುವವರಿಗೆ ಅಥವಾ ತಾಲ್ಲೂಕು ಮಟ್ಟದಲ್ಲಿ ಅಥವಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಯಾರಿಗೆ ಅಧಿಕಾರ ಕೊಡಬೇಕೆಂದಿದ್ದಾರೆ? ತಮ್ಮ ಪಕ್ಷದ ಜನರ ಕೈಲಿ ಅಧಿಕಾರ ಕೊಡಬೇಕೆಂದಿದ್ದಾರೆಯೇ? ಯಾರು ಯಾರು ಕಳ್ಳಭಟ್ಟಿ ಶರಾಬು ಮಾಡುತ್ತಿದ್ದಾರೆಂಬುದು ತಮಗೆ ಗೊತ್ತಿಲ್ಲದೆ ಇಲ್ಲ. ಆಕಡೆಯ ಜನರಿಗೂ ಗೊತ್ತಿದೆ, ಈ ಕಡೆಯ ಜನರಿಗೂ ಗೊತ್ತಿದೆ.

ನಮ್ಮ ಸ್ನೇಹಿತರು, ಕಾಂಗ್ರೆಸ್ಸಿನವರು ಏನು ಹೇಳುತ್ತಾರೆಂದರೆ ಹೆಂಡ ಕುಡಿಯುವವರನ್ನು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಈ ಸಭೆಯಲ್ಲಿರತಕ್ಕ ಈ ಭಾಗದಲ್ಲಿರತಕ್ಕ ಮಾನ್ಯ ಸದಸ್ಯರೂ ಕುಡಿಯುತ್ತಾರೆ. ಆ ಭಾಗದ ಮಾನ್ಯ ಸದಸ್ಯರು ಕುಡಿಯುತ್ತಾರೆ. ಆ ರೀತಿ ಕುಡಿತಕ್ಕೆ ಕಟ್ಟುಬಿದ್ದಿರುವ ಕಾಂಗ್ರೆಸ್ ಪಕ್ಷದವರು ನೀವು ಹೇಗೆ ಬೋಧನೆ ಮಾಡುತ್ತೀರಿ? ನಿಮಗೆ ಧೈರ್ಯ ಸ್ಥೈರ್ಯ ಇದ್ದರೆ ನಿಮ್ಮಲ್ಲಿ ಕುಡಿಯತಕ್ಕವರೆಲ್ಲರನ್ನೂ ಹೊರಗೆ ತೆಗೆದುಹಾಕಿ. 1 ಜನ ಸತ್ಯಸಂಧರು ಕಾಂಗ್ರೆಸ್ಸಿನಲ್ಲಿದ್ದರೆ ಸಾಕು. ದೇಶದ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಲ್ಲದೆಹೋದರೆ ಈಗ ನೀವು ಮಾಡುತ್ತಾ ಇರತಕ್ಕ ಅರ್ಧ ನಾರೀಶ್ವರ ಶಿಖಂಡಿ ಕಾನೂನು ಏನಿದೆ ಅದನ್ನು ದೇಶದಲ್ಲಿ ತಂದು ಪರಿಸ್ಥಿತಿ ಉಲ್ಬಣವಾಗಿ ಹೇಗೆ ಪ್ರಕೃತಿಯ ಪ್ರಕೋಪಕ್ಕೆ ಒಳಗಾಗಿ ನೂರಾರು ಮನೆಗಳು ನೂರಾರು ಪ್ರಾಣಿಗಳು ಗಂಗಾ ಭವಾನಿಯ ಪ್ರವಾಹದಲ್ಲಿ ಕೊಚ್ಚಿ ಹೋದವೋ ಹಾಗೆಯೇ ಕುಡಿತದ ಹಾವಳಿಯಲ್ಲಿ ಸಿಕ್ಕತಕ್ಕ ಬಡವರ ಪ್ರಕೋಪಕ್ಕೆ ಸಿಕ್ಕಿ ಕಾನೂನು ಮಾಡತಕ್ಕ ಪಾರ್ಟಿ ಆ ಪ್ರವಾಹದಲ್ಲಿ ಕೊಚ್ಚಿಹೋಗುತ್ತದೆ. ಪವಿತ್ರವಾದ ಕೆಲಸವನ್ನು ಮಾಡುವುದಕ್ಕೆ ಹೊರಟಿರತಕ್ಕ ನೀವು ಈ ಪಾನನಿರೋಧವನ್ನು ಜಯಪ್ರದವಮಾಡಬೇಕಾದರೆ ಈ ಕಾನೂನಿಂದ ಮಾತ್ರ ಸಾಧ್ಯವಿಲ್ಲ. ಮನಸ್ಸಿನಮೇಲೆ ಪರಿವರ್ತನೆಯಾಗಬೇಕು. ಸಮಾಜದಮೇಲೆ ಪರಿವರ್ತನೆಯಾಗಬೇಕು. ವಿಧೇಯಕದಲ್ಲಿ ಅಡಗಿರತಕ್ಕ ಯಾವುದೇ ಕಾಸುಗಳನ್ನು ತೆಗೆದುಕೊಂಡು ನಾನು ಮಾತನಾಡಿಲ್ಲ. ಒಳ್ಳೆಯ ಸಮಾಜವನ್ನು ಕಟ್ಟತಕ್ಕ ನಮ್ಮ ಸ್ನೇಹಿತರ ಕೈಯಲ್ಲಿ ಇಂಥಾ ವಿಧೇಯಕವು ಬಂತಲ್ಲಾ ಎಂದು ಮರಮರನೆ ಮರುಗಬೇಕಾಗಿದೆ. ನಮ್ಮ ಸ್ನೇಹಿತರಾದ ವೀರೇಂದ್ರ ಪಾಟೀಲ್ ಅವರು ಏನು ಹೇಳುತ್ತಾರೆ ಎಂದರೆ ಜನತೆಯನ್ನು ಸುಖೀರಾಜ್ಯದಲ್ಲಿ ರಾಮರಾಜ್ಯದಲ್ಲಿ ತಂದಿಟ್ಟು ಒಳ್ಳೆಯದನ್ನು ಮಾಡುತ್ತೇವೆ ಎಂದು. ಕೊನೆಯದಾಗಿ ಪ್ರಾಕ್ಟಿಕಲ್ ಆಗಿ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಈ ಸಭೆಯ ಮಾನ್ಯ ಸದಸ್ಯರು ಏನೇನು ಸೂಚನೆಗಳನ್ನು ಕೊಟ್ಟಿದ್ದಾರೋ ಅವುಗಳೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಅದನ್ನು ಕಾರ್ಯಗತ ಮಾಡಬೇಕು. ಎಂದು ನಾನು ಸರ್ಕಾರಕ್ಕೆ ಸೂಚನೆ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ ಈ ಪ್ರೋಹಿಬಿಷನ್ ಬಿಲ್ಲಿನ ವಿಚಾರವಾಗಿ ಈಗ ಎರಡು ಮೂರು ದಿವಸಗಳಿಂದಲೂ ಚರ್ಚೆನಡೆಯುತ್ತಿದೆ. ಈ ಸಂದರ್ಭದಲ್ಲಿ ನಾನು ಮಾತನಾಡಬೇಕೆ ಅಥವಾ ಮಾತನಾಡಬೇಡವೆ ಎಂದು ಯೋಚನೆ ಮಾಡಿದೆ. ಏತಕ್ಕೆಂದರೆ ಇದರಲ್ಲಿ ಪನಿಷ್‌ಮೆಂಟ್ ಪೋಲೀಸಿನವರು ಮತ್ತು ಸಿ. ಐ. ಡಿ ಗಳ ಭಯಕ್ಕಿಂತ ಸೋಷಿಯಲ್ ಫಿಯರ್ ಮತ್ತು ಮಾರಲ್‌ಫಿಯರ್ ಜಾಸ್ತಿಯಾಗಿದೆ. ಹೆಂಡದ ಮಾರಾಟಕ್ಕೂ ನಾನು ಹೇಳುವುದಕ್ಕೂ ಏನು ಸಂಬಂಧ ಎಂದು ಎಲ್ಲಾದರೂ ಯಾರಾದರೂ ಕೇಳುತ್ತಾರೋ ಏನೋ ಎಂದು ನನಗೆ ಎನ್ನಿಸಿತು. ಅದಕ್ಕೂ ನನಗೂ ಸಂಬಂಧವಿಲ್ಲದಿದ್ದರೂ ನಾನು ಮಾತನಾಡದೆ ಹೋದರೆ ಹೆಣ್ಣು ಮಕ್ಕಳ ಒಂದು ಕರ್ತವ್ಯ ಲೋಪವಾಗುತ್ತದೆ ಎನ್ನುವ ಒಂದು ಭಾವನೆಯಿಂದ ನಾನು ಮಾತನಾಡುವುದಕ್ಕೆ ಎದ್ದುನಿಂತಿದ್ದೇನೆ. ಈಗ ತಾನೆ ಶ್ರೀಮಾನ್ ಬೋರಣ್ಣಗೌಡರು ಮಾತನಾಡುತ್ತಾ ಹೇಳಿದರು ಇದನು ವಿರೋಧಿಸುವವರೆಲ್ಲರೂ ದೇಶದ್ರೋಹಿಗಳು, ಮತ್ತು ಇದಕ್ಕೆ ಬೆಂಬಲ ಕೊಡತಕ್ಕವರೆಲ್ಲರೂ ದೇಶಭಕ್ತರು ಮತ್ತು ದೇಶಾಭಿಮಾನಿಗಳು ಎನ್ನುವ ಧಾಟಿಯಲ್ಲಿ ಮಾತನಾಡಿದರು. ಆದರೆ ದೇಶಭಕ್ತಿ ಇವರುಗಳ ಮನಾಪಲಿಯೇ ಅಲ್ಲ. ಅದು ಎಲ್ಲರಿಗೂ ಇದ್ದೇಇರುತ್ತದೆ. ಅದರಲ್ಲೂ ಹೆಣ್ಣು ಮಕ್ಕಳಿಗೆ ದೇಶಭಕ್ತಿ ಜಾಸ್ತಿ ಇರುತ್ತದೆ ಎಂದು ನನ್ನ ಅಭಿಪ್ರಾಯ. ಪ್ರೊಹಿಬಿಷನ್ ವಿಚಾರದಲ್ಲಿ, ಹೊರಗಡೆ ಯಾವರೀತಿ ನಡೆಯುತ್ತದೆ, ಹೆಂಡ, ವಿಸ್ಕಿ, ರಮ್ ಇವುಗಳು ಯಾವ ರೀತಿ ಮಾರಾಟವಾಗುತ್ತಿವೆ ಎಂಬುದನ್ನು ನಾನು ಸ್ವಲ್ಪಮಟ್ಟಿಗೆ ನೋಡಿಕೊಂಡು ಬಂದಿದ್ದೇನೆ. ಮತ್ತು ಅಲ್ಲಿನ ಜನಗಳಿಂದ ತಿಳಿದುಕೊಂಡೂ ಬಂದಿದ್ದೇನೆ. ಅಲ್ಲಿನ ಜನಗಳು ಹೆಂಡವನ್ನು ಕುಡಿದು ಯಾರೂ ರೋಗಿಗಳಾಗಿಲ್ಲ, ಯಾರೂ ಸತ್ತುಹೋಗಿಲ್ಲ, ಅವರು ಆರೋಗ್ಯವಾಗಿದ್ದಾರೆ. ಮತ್ತು ಅವರು ಮನೆ ಮಠಗಳನ್ನು ಮಾರಿಕೊಂಡು ಯಾರು ಪಾಪರ್ ಆಗಿಲ್ಲ, ಅದನ್ನು ಕುಡಿದು ಬುದ್ಧಿಭ್ರಮಣೆಯಾಗಿ ಯಾರೂ ಹುಚ್ಚು ಆಸ್ಪತ್ರೆಗೆ ಸೇರಿಲ್ಲ, ಎಂದು ನಾನು ಈ ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ನಾನು ಸ್ವೀಡನ್‌ನಲ್ಲಿ ಒಂದು ವಾರ ಕಾಲ ಇದ್ದೆ. ಅಲ್ಲಿ ದೊಡ್ಡ ದೊಡ್ಡ ಬ್ಯಾಂಕ್ವೆಟ್ಸ್‌ಗಳು, ಪಾರ್ಟಿಗಳು ಇವುಗಳಲ್ಲಿ ಮಾತನಾಡುವ ಸಂದರ್ಭದಲ್ಲಿ ನಾನು ನಮ್ಮ ದೇಶದ ಸ್ಥಿತಿಗತಿಗಳು ಇತ್ಯಾದಿ ವಿಚಾರಗಳ ಬಗ್ಗೆ ಮಾತನಾಡಿ ಬಂದಿದ್ದೇನೆ. ಅಲ್ಲಿನ ಜನಗಳು ಹೇಳಿದರು ಪ್ರೊಹಿಬಿಷನ್ ಪಾಲಸಿ ವಿಚಾರದಲ್ಲಿ ನಾವು

ಪ್ರಯತ್ನಪಟ್ಟು ಅದನ್ನು ಕೈಬಿಟ್ಟಿದ್ದೇವೆ, ಮತ್ತು ಫೈಲ್ಯೂರ್ ಆಗಿದ್ದೇವೆ ಎಂದು. ನಮ್ಮ ದೇಶದಲ್ಲಿ ಈಗ ಇವರು ಮಾಡುತ್ತಿರುವುದನ್ನು ನೋಡಿದರೆ ಇವರುಗಳು ದೊಡ್ಡ ತಪ್ಪು ಮಾಡಿದ್ದಾರೆ ಎಂದು ನನಗನ್ನಿಸುತ್ತದೆ, ಮತ್ತು ನಗು ಬರುತ್ತದೆ. ಈಗ ಏನಾಗಿದೆ ಎಂದರೆ ಈಗ ಇವರ ಕೈಗೆ ಅಧಿಕಾರ ಕೊಟ್ಟಿರುವುದು ಕಾಗೆ ಕೈಯ್ಗೆ ಕಾರ್ ಬಾರ್ ಕೊಟ್ಟಹಾಗೆ ಆಗಿದೆ. ದೊಡ್ಡ ದೊಡ್ಡ ಪೋಲೀಸ್ ಸ್ಕ್ವಾಡ್ ತೆಗೆದುಕೊಂಡು ಹೋಗಿ ಕಳ್ಳಬಟ್ಟಿ ಸಾರಾಯಿ ತಯಾರು ಮಾಡುವ ಮಡಕೆ ಕುಡಿಕೆ ಇವುಗಳನ್ನೆಲ್ಲಾ ಅಗೆದು ಎಗ್ಸಿಬಿಷನ್ ಇಡುತ್ತಿದ್ದಾರೆ. ಒಂದು ಮನೆಯಲ್ಲಿ ಕಳ್ಳಬಟ್ಟಿ ತಯಾರಿಸತಕ್ಕ ಮಡಿಕೆ ಕುಡಿಕೆಗಳನ್ನು ಅಗೆಸಿದರೆ ಅದು ಪೂರೈಸುತ್ತದೆಯೇ ? ಅದು ಹೀಗೆಯೇ ಎಷ್ಟೋ ಮನೆಗಳಲ್ಲಿ ನಡೆಯುತ್ತಾ ಇದೆ. ಮಾನ್ಯ ಸಚಿವರಾದ ಶ್ರೀ ವೀರೇಂದ್ರ ಪಾಟೀಲರಿಗೆ ಈ ವಿಧೇಯಕದ ಕಾರ್ಯವನ್ನು ವಹಿಸಿರುವುದು ಬೆಟ್ಟಕ್ಕೆ ಸೀರೆಯನ್ನು ಉಡಿಸಿದ ಹಾಗೆ ಆಗಿದೆ; ಆಕಾಶಕ್ಕೆ ಏಣಿಯನ್ನು ಹಾಕಿದ ಹಾಗೆ ಆಗಿದೆ. ಶ್ರೀಮಾನ್ ಆರ್ಮುಗಮ್ ಅವರು ಹೇಳಿದರು: ಆರೋಗ್ಯದೃಷ್ಟಿಯಿಂದ ಇದನ್ನು ಇಂಟರ್‌ಡ್ಯೂಸ್ ಮಾಡುತ್ತಾ ಇದ್ದಾರೆಂದು ಶ್ರೀಮಾನ್ ನರಸಿಂಹನ್ ಅವರು ಹೇಳಿದರು. ಇಲ್ಲಿಸಿಟ್ ಡಿಸ್ಟಿಲೇಷನ್‌ನಿಂದ ಎಕನಾಮಿಕ್ ಕಂಡೀಷನ್ ಇಂಪ್ರೂವ್ ಆಗುವುದು ಎಂದು ಅದು ನಿಜ ಎಂದು ಕಾಣುತ್ತದೆ. ಎಕನಾಮಿಕ್ ಕಂಡೀಷನ್ ಇಂಪ್ರೂವ್ ಆಗಿರಬಹುದು. ಆರೋಗ್ಯ ದೃಷ್ಟಿಯಿಂದ ಹೇಳುವುದಾದರೆ ಕುಡಿಯುವುದನ್ನು ಕಲಿತುಕೊಂಡಿರುವವರು ಅದನ್ನು ಬಿಟ್ಟು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿರುವುದು ನಮ್ಮ ಕಣ್ಣಿಗೆ ಕಾಣುತ್ತಿದೆ. ಬಡಜನಗಳ ಕೈಗೆ ಹೆಂಡ ಸಿಕ್ಕ ಬಾರದು ಹಾಗೆ ಮಾಡಬೇಕು ಎಂದು ಕಾನೂನು ಮಾಡಿ ಪೋಲೀಸ್ ಸ್ಕ್ವಾಡ್ ಅನ್ನು ತೆಗೆದುಕೊಂಡು ಹೋಗಿ ಮಡಿಕೆ ಕುಡಿಕೆಗಳನ್ನು ಒಡೆದು ವಾಪಸ್ಸು ಬಂದರೆ ಅದು ಆಗುವುದಿಲ್ಲ. ಬೇರೆ ದೇಶದಲ್ಲಿ ಎಕ್ಸೈಜ್ ಪಾಲಿಸಿ ವಿಚಾರದಲ್ಲಿ ಏನು ಮಾಡಿದ್ದಾರೆಂಬುದನ್ನು ನೋಡಬೇಕು. ಜಾಸ್ತಿ ಡ್ಯೂಟಿ ಹಾಕಿ, ಬಡಜನರಿಗೆ ಒದಗಿಸದಂತೆ ಮಾಡಬಹುದಾಗಿತ್ತು.—ಬಂದರವೇರೊಂದರಂತೆ ಆಕಾಶಕ್ಕೆ ಏಣಿ ಹಾಕುತ್ತಿರುವ ಹಾಗೆ ಇದಕ್ಕಾಗಿ ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದೀರಿ. ಆ ಕಮೀಷನ್ನು ಈ ಕಮೀಷನರು, ಮೆಂಬರುಗಳು ಇವರುಗಳಿಗೆಲ್ಲಾ ಟಿ. ಎ. ಡಿ. ಎ. ಆಫೀಸು ವಿಧಾನಸೌಧದಲ್ಲಿ ಒಂದು ರೂಮು ಅಂತ ಆಗಿ ಬರುವ ರೆವಿನ್ಯೂ ಎಲ್ಲಾ ಇದಕ್ಕೆ ಖರ್ಚು ಮಾಡುತ್ತಾ ಇದ್ದೀರಿ ನಿಜವಾಗಿಯೂ ನಮ್ಮ ದೇಶಕ್ಕೆ ತೊಂದರೆ ಮಾಡುತ್ತ ಇದ್ದೀರಿ ಎಂದು ಹೇಳದೇ ವಿಧಿಯೇ ಇಲ್ಲ.

ಡೆಕ್ಕನ್ ಹೆರಾಲ್ಡ್ ಪೇಪರ್‌ನಲ್ಲಿ ಜ್ಯೂರನ್ ಎಂಬುವರು This is India ಅಂತ ಹೇಳಿ ಒಂದು ಆರ್ಟಿಕಲ್ ಬರೆದಿದ್ದಾರೆ. ತಾವು ಓದಿ ನೋಡಬಹುದು. ಇಂಡಿಯಾದಲ್ಲಿ ಪ್ರೊಹಿಬಿಷನ್‌ನಿಂದ ಆಗುತ್ತಾ ಇರುವ ಅನ್ಯಾಯ ಏನೂ : ಎಷ್ಟು ಹೀನಾಯವಾಗಿ ಕಾಣುತ್ತಾ ಇದ್ದಾರೆ; ನಮಗೆ ಬುದ್ಧಿಯೇ ಇಲ್ಲವೇನೋ ಎನ್ನುವ ತರಹದಲ್ಲಿ ಬರೆದಿದ್ದಾರೆ. ಇಷ್ಟು ಅನ್ಯಾಯವಾಗುತ್ತಾ ಇರುವುದನ್ನು ಒಂದು ಕ್ಷಣ ಯೋಚನೆ ಮಾಡಿ. ನಿಜವಾಗಿಯೂ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಅಗತ್ಯ. ಒಂದೇ ದಿವಸ ಒಂದೇ ರಾತ್ರಿಯಲ್ಲಿ ಕುಳಿತು ಕೊಂಡು ಇದನ್ನು ಪಾಸ್ ಮಾಡುತ್ತೇವೆ ಎಂದರೆ ನಿಜವಾಗಿಯೂ ಸಾಧ್ಯವಿಲ್ಲ. ಡ್ಯೂಟಿ ಜಾಸ್ತಿ ಹಾಕಿ, ರೆವಿನ್ಯೂ ಜಾಸ್ತಿ ಮಾಡಿಕೊಂಡು ಈ ಕೆಲಸ ಮುಂದುವರಿಸುವುದು ಸೂಕ್ತ. ಸ್ವೀಡನ್‌ನಲ್ಲಿ ಏನಾಯಿತು ? ಮೊದಲು ಪ್ರೊಹಿಬಿಟ್ ಮಾಡಿದಾಗ ಪ್ರತಿಯೊಬ್ಬರೂ ಕದ್ದು ಕುಡಿಯುವುದಕ್ಕೆ ಶುರು ಮಾಡಿದರು. ಹತೋಟಿಯನ್ನು ತೆಗೆದಮೇಲೆ ಕುಡಿಯುತ್ತಿದ್ದವರೂ ಸಹ ಕುಡಿಯುವುದನ್ನು ಬಿಟ್ಟು ಕೋಕಾಕೋಲ ತೆಗೆದು ಕೊಳ್ಳುವುದಕ್ಕೆ ಪ್ರಾರಂಭಿಸಿದರಂತೆ. ಎಂದರೆ ಮನುಷ್ಯನ ಬುದ್ಧಿ ಯಾವಾಗಲೂ ಯಾವುದನ್ನು ಮಾಡಬಾರದು ಎನ್ನುತ್ತಾರೆಯೋ ಅದನ್ನೇ ಮಾಡಬೇಕೆನ್ನುವುದು. ಇದು ಎಲ್ಲ ಜನರ ಅನುಭವ, ಸ್ವಭಾವ. ಆದ್ದರಿಂದ ಇಷ್ಟು ಕಟುತರವಾದ ಶಿಕ್ಷೆ ವಿಧಿಸುವುದು ಸರಿಯಲ್ಲ, ಈ ಬಿಲ್ಲನ್ನು ಇಷ್ಟು ಅವಸರವಾಗಿ ಪಾಸ್ ಮಾಡಿಸುವುದಕ್ಕೆ ಹೋಗದೇ ಸೆಲೆಕ್ಟ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕಮಿಟಿಗೆ ಕಳುಹಿಸಬೇಕೆಂದು ಹೇಳಿ ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಡಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ ನಮ್ಮ ಕಾಂಗ್ರೆಸ್ ಮಿತ್ರರು 14 ವರ್ಷಗಳ ಹಿಂದೆ ಜನತೆಗೆ ಕಂದಾಯ ವಜಾ ಮಾಡುತ್ತೇವೆ, ತಿರುಪೆ ಮಾಡಿ ತಂದು ಅನ್ನ, ಬಟ್ಟೆ ಕೊಡುತ್ತೇವೆ, ದೇಶದಲ್ಲಿ ರಾಮರಾಜ್ಯ ಸ್ಥಾಪನೆಮಾಡುತ್ತೇವೆ ಎಂದು ಹೇಳುತ್ತಾ ಇದ್ದ ಕಾಲದಲ್ಲಿ ಪಾನ ನಿರೋಧ ಮಾಡಿ ಕುಡಿತವನ್ನು ತಪ್ಪಿಸುತ್ತೇವೆ ಎಂದು ಹೇಳುತ್ತಾ ಇದ್ದರು. ಇದನ್ನು ತಪ್ಪಿಸಬೇಕಾದರೆ ಬಹಳ ಕಷ್ಟ ಇದೆ. ತಂಗಿ ನಾಗರತ್ನಮ್ಮನವರು ಈಗಾಗಲೇ ಅನೇಕ ವಿಷಯ ಗಳನ್ನು ಹೇಳಿದರು. ನಾನು ಹೆಚ್ಚು ಹೇಳುವುದಿಲ್ಲ. ಕೆಲವು ಅಂಶಗಳನ್ನು ಮಾತ್ರ ಹೇಳುತ್ತೇನೆ. ವೀರೇಂದ್ರ ಪಾಟೀಲ್ ಅವರು ಮೀಸೆ ತಿರುವುತ್ತಾರೆ ಈ ಬಿಲ್ ನಾನು ಈಗ ಪಾಸ್ ಮಾಡಿಸು ತ್ತೇನೆ ಎಂದು (ನಗು) ಇದು 14 ವರ್ಷದ ಹಿಂದೆ ಕೊಟ್ಟ ವಾಗ್ದಾನ. 14 ವರ್ಷ ಕಳೆದ ಮೇಲೆ ಎರಡು ವರ್ಷದ ಹಿಂದೆ ಗೆಜೆಟ್‌ನಲ್ಲಿ ಛಾಯಿಷ್ ಮಾಡಿ, ಈಗ ಎಲೆಕ್ಷನ್ ಹತ್ತಿರ ಹತ್ತಿರ ಬರುತ್ತಾ ಇದ್ದ ಹಾಗೆ ನಿಮ್ಮ ಚಾಣಾಕ್ಷತೆಯನ್ನು ತೋರಿಸುವುದಕ್ಕೆ ತಂದಿದ್ದೀರಿ ಎಂದು ಹೇಳದೆ ವಿಧಿಯಿಲ್ಲ. 14 ವರ್ಷದ ಹಿಂದೆಯೇ ಇದನ್ನು ತಂದಿದ್ದರೆ ಚೆನ್ನಾಗಿತ್ತು. ಅಥವಾ ನಾಲ್ಕು ವರ್ಷದ ಹಿಂದೆ ತಂದಿದ್ದರೆ ಚೆನ್ನಾಗಿತ್ತು. ಪಾನನಿರೋಧವನ್ನು ಜಾರಿಗೆ ತಂದು ಅದರಿಂದ ಉಂಟಾಗ ತಕ್ಕ ನಷ್ಟವನ್ನು ಸರಿ ತೂಗಿಸಲು ಸೇಲ್ಸ್ ಟ್ಯಾಕ್ಸ್ ಹಾಕಿ ಆ ಮೂಲಕ ಉತ್ಪತ್ತಿ ಯನ್ನು ಕಾಂಪೆನ್‌ಸೇಟ್ ಮಾಡುತ್ತೇವೆ ಎಂದು ಹಿಂದೆ ವಾಗ್ದಾನ ಕೊಟ್ಟಿರಿ. ಆ ವಾಗ್ದಾನ ಉಳಿಸಿ ಕೊಂಡಿದ್ದೀರಾ ? 12 ಕೋಟಿ ರೂಪಾಯಿಗೆ ಮೇಲ್ಪಟ್ಟು ಸೇಲ್ಸ್‌ಟ್ಯಾಕ್ಸ್‌ನಿಂದ ಉತ್ಪನ್ನ ಇದೆ. ಆದರೆ ಈ ಎಕ್ಸೈಜ್ ಬಾಬಿನಲ್ಲಿ ಅಷ್ಟು ಉತ್ಪನ್ನ ಬರುತ್ತಾ ಇಲ್ಲ, ಆದರೂ ಪೂರ್ತಿ ಪಾನನಿರೋಧ ಜಾರಿಗೆ ತಂದಿಲ್ಲ ಎಂದರೆ ಖಂಡಿತವಾಗಿಯೂ ಇದು ದಗಾಬಾಜಿ, ಅಥವಾ ದಗಾಕೋರ ಅಥವಾ ದೇಶದ್ರೋಹ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಪ್ರೊಹಿಬಿಷನ್ ಇಂಟ್ರೊಡ್ಯೂಸ್ ಮಾಡಿ ಎಂತಲೂ ಹೇಳುವುದಿಲ್ಲ. ಮಾಡಬೇಡಿ ಎಂತಲೂ ಹೇಳುವುದಿಲ್ಲ. ಗುಲ್ಬರ್ಗಾದಲ್ಲಿ ಕುಡಿಯ ಬಹುದು ತುಮಕೂರಿನಲ್ಲಿ ಕುಡಿಯಬಾರದು ಎಂದರೆ ಅದು ಏಕೆ ಸ್ವಲ್ಪ ಹೇಳಿ ಸ್ವಾಮಿ ! ನಾನು ಮಲೆನಾಡು ಪ್ರದೇಶದಲ್ಲಿ 10 ವರ್ಷಗಳ ಕಾಲ ಕೆಲಸದಲ್ಲಿದ್ದೆ. ನನಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಅಕ್ಕಿ ಭೋಜ ಅಂತ ಮಾಡುತ್ತಾರೆ ಬೊಂಬಾಯಿನಲ್ಲಿ ಅಕ್ಕಿ ಭೋಜ ಅಂತ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ರಾ ಸೆಕ್ರೆಟೇರಿಯಟ್‌ನಲ್ಲಿ ಪಿಂಡಾರ್‍ಫೇರ್ ಆಗಿದೆ. ಅವರು ಅಲ್ಲಿ ಕುಳಿತು ಕೊಂಡು ಈ ಕಾನೂನಿನ ಕರಡು ತಯಾರು ಮಾಡಿಟ್ಟರೆ ವೀರೇಂದ್ರಪಾಟೀಲ್‌ರು ಮಕ್ಕಿಕಾ ಮಕ್ಕಿ ಇಲ್ಲಿ ಇಂಟ್ರೊಡ್ಯೂಸ್ ಮಾಡುತ್ತಾರೆ. ಅಕ್ಕಿ ಭೋಜದಿಂದ ಬಡವರಿಗೆ ಆಗತಕ್ಕ ದ್ರೋಹ ಮತ್ತಾವುದ ರಿಂದಲೂ ಆಗುವುದಿಲ್ಲ, ಸೇಲ್ಸ್‌ಟ್ಯಾಕ್ಸ್‌ನಿಂದ 12 ಕೋಟಿ ರೂಪಾಯಿ ಉತ್ಪನ್ನ ಬಂದರೂ ದೇಶದಲ್ಲಿ ಪೂರ್ಣ ಪಾನನಿರೋಧ ಜಾರಿಗೆ ತರಲಿಲ್ಲ. ಸರಕಾರಕ್ಕೆ ಲುಕ್ಸಾನಾಗುತ್ತದೆ ಎಂದರೆ ಎಷ್ಟು ಲುಕ್ಸಾನಾಗುತ್ತದೆ ? ಮೈಸೂರು ದೇಶದಲ್ಲಿ ಇವತ್ತಿನವರೆಗೂ ಕೋಟ್ಯಾಂತರ ರೂಪಾಯಿ ಲುಕ್ಸಾನಾಗಿದೆ, ಕೋಟ್ಯಾಂತರ ರೂಪಾಯಿ ಜನಗಳ ಕಣ್ಣಿಗೆ ಮಣ್ಣು ಹಾಕಿ, ಲುಕ್ಸಾನು ಮಾಡಿ ದೇಶದ್ರೋಹ ಮಾಡುತ್ತಾ ಇದ್ದೀರಿ. ಇಷ್ಟು ಲುಕ್ಸಾನಾಗುತ್ತಾಯಿರುವಾಗ ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ. ಬಾಗಿಲನಲ್ಲಿ ಹೋಗುವುದನ್ನು ಬಿಟ್ಟು ಬಿಟ್ಟು ಬಾದಲದಲ್ಲಿ ಹೋಗುವುದನ್ನು ತಡೆ ಮಾಡಿದರು ಎನ್ನುವ ಹಾಗೆ ಈ ರೀತಿ ದೇಶದ್ರೋಹ ವಾಗುತ್ತಾ ಇದೆ. ಯಾರಾದರೂ ಇರಲಿ, ಸತ್ಯ ವಾಗಿ ರಾಜ್ಯಭಾರ ಮಾಡಿ. ಸ್ವಾಮಿ ಮೊನ್ನೆ ತಾನೆ ಎಕಾನಮಿ ಅಂಡ್ ರಿಸೋರ್ಸಸ್ ಕಮಿಟಿ ಅಂತ ಹೇಳಿ ಒಂದು ಕಮಿಟಿ ಮಾಡಿದ್ದಾರೆ. ಅದಕ್ಕೆ ಸಾವಿರಾರು ರೂಪಾಯಿ ಖರ್ಚಾಗುತ್ತಾ ಇದೆ. ಈಗ ಪುನಃ ಪ್ರೊಹಿಬಿಷನ್ ಕಮೀಷನರ್ ಅಂತ ಹೇಳಿ ಒಬ್ಬರನ್ನು ನೇಮಕ ಮಾಡಬೇಕೆಂದಿದ್ದೀರಿ. ಅವರು ಐ. ಎ. ಎಸ್ಸೋ, ಅಥವಾ ಐ. ಪಿ. ಎಸ್ಸೋ ಅಧಿಕಾರಿಗಳೋ 2000 ರೂಪಾಯಿ ಅವರಿಗೆ

ಸಂಬಳ, ಮತ್ತು ಅವರಿಗೆ ಸಿಬ್ಬಂದಿ, ಈಗ ಆಗುತ್ತಾ ಇರುವ ಖರ್ಚಿನಲ್ಲಿ ಮಿತವ್ಯಯ ಮಾಡಿ ಎಂದರೆ ಅದು ಬಿಟ್ಟು ಬಿಟ್ಟರು. ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ ದೇಶಕ್ಕೆ ನೀವು ದ್ರೋಹ ಮಾಡುತ್ತಾ ಇದ್ದೀರಿ. ಇದನ್ನು ನೋಡಿದರೆ ಚುನಾವಣೆ ಹತ್ತಿರಕ್ಕೆ ಬಂತು ಎಂದು ಹೇಳಿ ಹೀಗೆ ಮಾಡುತ್ತಾ ಇದ್ದೀರಿ ಎಂದು ಅರ್ಥವಾಗುತ್ತದೆ.

ಶ್ರೀಮಾನ್ ಚನ್ನಬಸಪ್ಪನವರಂಥ ನಿಸ್ಪೃಹರಾದ ಒಬ್ಬೊಬ್ಬರು ಮಂತ್ರಿಗಳಿದ್ದರೆ ಸಾಕು ದೇಶ ಉದ್ಧಾರವಾಗುತ್ತದೆ, ಸತ್ಯವಾಗಿ ಹೇಳುತ್ತೇನೆ. ಅವರು ಮಾಡುತ್ತಿರುವಂಥ ಕೆಲಸ ನಾನು ನೋಡಿದ್ದೇನೆ, ನಾನೂ ಸಹ ಪೋಲೀಸ್ ಆಫೀಸರ್ ಆಗಿದ್ದೆ ಶ್ರೀಮಾನ್ ಚನ್ನಬಸಪ್ಪನವರು ಹೋಮ್ ಮಿನಿಸ್ಟರ್ ಆಗಿ ಬಂದಮೇಲೆ ಜನಗಳಿಗೆ, ಪೋಲೀಸ್‌ನವರಿಗೆ ವಾರ್ನಿಂಗ್ ಕೊಟ್ಟರು ಇಂಥಾ ಕೆಲಸ ಮಾಡಬೇಡಿ, ಮಾಡಿದರೆ ಹಿಡಿಯುತ್ತೇವೆ ಎಂದು ಹೇಳಿದರು. 1-2 ತಿಂಗಳ ಕಾಲ ಅವಕಾಶ ಕೊಟ್ಟು ಹಿಡಿದ್ದಿದ್ದಾರೆ. ಎಷ್ಟೋ ಜನಗಳು ಭಯಪಟ್ಟಿದ್ದಾರೆ! ಕೆಟ್ಟು ಹೋಗುತ್ತೇವೆ ಎಂದು ಅನೇಕರು ಈ ಕಳ್ಳ ಭಟ್ಟಿ ತಯಾರುಮಾಡುವುದನ್ನು ಬಿಟ್ಟು ಬಿಟ್ಟರು. ನಾನೇ ಕೋರ್ಟಿನಲ್ಲಿ ಎಷ್ಟೋ ಕೇಸುಗಳಲ್ಲಿ ಡಿಫೆಂಡ್ ಮಾಡಿದ್ದೇನೆ. ಲಿಂಗಾಯಿತರು ಎಷ್ಟೋಜನ ಇಲಸಿಟ್ ಡಿಸ್ಟಿಲೇಷನ್ ಮಾಡುತ್ತಾ ಇದ್ದರು ಈಗ ಬಿಟ್ಟಿದ್ದಾರೆ. ಅವರು ಮಿನಿಸ್ಟರ್ ಆಗಿದ್ದಾರೆ ಎಂದು ಯಾರನ್ನಾದರೂ ಕೆಲಸಕ್ಕೆ ಸೇರಿಸುವುದಕ್ಕಾಗಲಿ ನನ್ನ ಮಗನಿಗೆ ಅವರು ಕೆಲಸ ಕೊಡುತ್ತಾರೆ ಎಂದು ಆಗಲೀ ನಾನು ಅವರನ್ನು ಹೊಗಳುತ್ತಿಲ್ಲ. ಯಾರ ದಾಕ್ಷಿಣ್ಯಕ್ಕು ಒಳಗಾಗದೇ ಹೇಳುತ್ತಿದ್ದೇನೆ ಶ್ರೀಮಾನ್ ಚನ್ನಬಸಪ್ಪನವರು ತೆಗೆದುಕೊಂಡ ಕ್ರಮ ನೋಡಿ ಇಂಥಾ ಕೇಸುಗಳು ಎಷ್ಟೋ ಕಡಿಮೆ ಆಗಿದೆ. ಅಲ್ಲದೆ ಅವರು Prohibition is not successful ಎಂದು ತೋರಿಸಿದ್ದಾರೆ. ಇವನು ಕಾಂಗ್ರೆಸ್‌ನವನು, ಇವನು ಸೋಷಿಯಲಿಸ್ಟ್ ಪಾರ್ಟಿ ಅವನು ಅಂತ ಹೇಳಿ ನೋಡುತ್ತಿಲ್ಲ, ಇವನು ಗುಲ್ಬರ್ಗಾದವನು ಇವನು ಬೆಂಗಳೂರಿನವನು ಎಂದು ನೋಡುತ್ತಿಲ್ಲ. ಪ್ರೊಹಿಬಿಷನ್ ಕಮೀಷನರು ಏಕೆ? ಏನು ಕಾರಣ? ಬೆಂಗಳೂರಿನಲ್ಲಿ ಕುಳಿತು ಅವರು ಮಾಡುವುದಾದರೂ ಏನು? ಎಕ್ಸೈಜ್ ಕಮೀಷನರು ಆ ಕೆಲಸ ಮಾಡುವುದಕ್ಕಾಗುವುದಿಲ್ಲವೇ? ದೇಶಕ್ಕೆ ಎಷ್ಟು ಅನ್ಯಾಯವಾಗುತ್ತದೆ ನೋಡಿ? ಸೆಕ್ಷನ್ (6) ರಲ್ಲಿ "The State Government may also invest any person working in an honorary capacity..." ಎಂದು ಹೇಳಿದ್ದೀರಿ. ಇಂಥಾ ಅನರೆರಿ ಪೋಸ್ಟನ್ನು ಯಾರಿಗೆ ಕೊಡುತ್ತೀರಿ ನಮಗೆ ಗೊತ್ತು. ಯಾರು ಎಲೆಕ್ಷನ್ನಲ್ಲಿ ಸೋಲುತ್ತಾರೋ ಯಾರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕುವುದಿಲ್ಲ ಅಂಥವರಿಗೆಲ್ಲಾ ಅಲ್ಲಿ ಅವಕಾಶ ಮಾಡಿ ಕೊಡುತ್ತೀರಿ. ಆಗ ಏನಾಗುತ್ತದೆ ಎಂದರೆ ಕುಡಿಯುದೇ ಇರುವವನನ್ನು ಹಿಡಿದು ಕೊಟ್ಟು ತಾನು ದುಡ್ಡು ಮಾಡುತ್ತಾನೆ. ಖಂಡಿತವಾಗಿಯೂ ಉದ್ದೇಶ ಅದೇ. ನಿಮಗೆ ಈಗ ಆ ಉದ್ದೇಶ ಇಲ್ಲದೆ ಇದ್ದರೂ ಮುಂದೆ ಆಗುವುದು ಹಾಗೇ. ಕ್ಲಾಜ್ 2 ಇದಕ್ಕೆ ಅರ್ಥವಿದೆಯೇ? ಇದೊಂದು disgrace ಏತಕ್ಕಾಗಿ ಇಷ್ಟು ಪವರ್ಸ್ ಕೊಡುತ್ತೀರಿ! ಇದರಲ್ಲಿ ಯಾವ ಉದ್ದೇಶವಿದೆ! ಅಂದರೆ ಕಾಂಗ್ರೆಸ್ ಜನರನ್ನು ಸಮಾಧಾನ ಮಾಡುವುದಕ್ಕಾಗಿ ಇದೆ. ಬಸ್ಸಿನಲ್ಲಿ, ಹೋಟೇಲಿನಲ್ಲಿ, ರೈಲಿನಲ್ಲಿ ರಸ್ತೆಯಲ್ಲಿ ಎಲ್ಲಿ ಬೇಕಾದರಲ್ಲಿ ಜನ ನಿಮ್ಮ ಬಗ್ಗೆ ಮಾತನಾಡುತ್ತಿದ್ದಾರೆ. ಈ ರೀತಿ ಕೆಟ್ಟ ಹೆಸರು ಬರುವಹಾಗೆ ರಾಜ್ಯಭಾರ ಮಾಡಬೇಡಿ. ಚೆನ್ನಾಗಿ ರಾಜ್ಯಭಾರ ಮಾಡಿ ಅಂದರೆ ನಿಮಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ. ಇಲ್ಲದಿದ್ದರೆ ನೀವು ನಾಶ ಹೊಂದುತ್ತೀರಿ.

4-30 P.M.

ಇನ್ನು ಸೆಕ್ಷನ್ 8 ಇದಕ್ಕೆ ಅರ್ಥವಿದೆಯೇ? ಕಮಿಟಿಗಳನ್ನು ಏತಕ್ಕೆ ಮಾಡುತ್ತೀರಿ? ಈ ಮೊದಲು ಮಾಡಿದ ಕಮಿಟಿಗಳ ಅನುಭವ ಏನಿದೆ. ಎಂಬುದು ಎಲ್ಲರಿಗೂ ಗೊತ್ತಿದೆ. ಗಾಂಧೀ ಭಕ್ತರಿಗೆಲ್ಲಾ ಒಂದೊಂದು ಸ್ಥಾನ ಕೊಡುವುದು ಮತ್ತು ಅವರು ಯಾರು ಯಾರನ್ನಾದರೂ ಹಿಡಿದು ದುಡ್ಡು ಕಿತ್ತುಕೊಳ್ಳುವುದು ನಡೆದಿದೆ. ಕಮಿಟಿ ಮಾಡಬೇಕೆಂಬ ಕ್ಲಾಜನ್ನು ತೆಗೆದು ಹಾಕಬೇಕು. ಇಲ್ಲದಿದ್ದರೆ ದೇಶದಲ್ಲಿ ಅನಾಹುತವಾಗುತ್ತದೆ. ಕಮಿಟಿ ಮಾಡುವ ಸಾರ್ಥಕ

(ಶ್ರೀ ಜಿ. ಎಸ್. ಪುಟ್ಟಣ್ಣ)

ಬೇಡ. ನಮಗೆ ನಕಲಿ ಕುಣಿತ ಬೇಡ. ನಿಜವಾದ ಕುಣಿತ ಇರಲಿ. ದೇಶಕ್ಕೆ ಒಳ್ಳೆಯದನ್ನು ಮಾಡಿ.

ಸ್ವಾಮಿ, ಇನ್ನು ಕ್ಲಾಜು 19ರಲ್ಲಿ a bond has to be executed for the payment of tax thereof ಎಂದಿದೆ ಎಷ್ಟು ಜನ ಕಾಂಗ್ರೆಸ್ಸಿನವರು warehouses ನಿಂದ ತೆಗೆದುಕೊಂಡು ಹೋಗುವುದಕ್ಕೆ ಬಾಂಡ್ ಕೊಡುತ್ತೀರಾ ? ಈ ಬಾಂಡು ಯಾತಕ್ಕೆ ? ಉಪ್ಪು ಹಾಕಿ ನೆಕ್ಕುವುದಕ್ಕೆ ಈ ಬಾಂಡು ಎಂದು ಕಾಣುತ್ತದೆ. ದೇಶಕ್ಕೆ ಇಂಥಾ ದ್ರೋಹ ಮಾಡು ವುದನ್ನು ನಾನು ನೋಡಿಲ್ಲ.

Clause 31 permits to foreigners residing temporarily in India. ಫಾರೆನರ್ಸ್ ಯಾರು ಯಾರು ಎನ್ನುವುದಕ್ಕೆ ರಿಜಿಸ್ಟರ್ ಇಟ್ಟಿದ್ದೀರೇನು ? ರಿಜಿಸ್ಟರ್ ಎಲ್ಲಿ ಇಟ್ಟಿದ್ದೀರಿ ? ಸೆಕ್ಷನ್ 31ರ ಪ್ರಕಾರ ಯಾರೋ ಒಬ್ಬರು ಡಾಕ್ಟರ್ ಜೆಮ್ ಅಂಡ್ ಬೊವ್ಮ ಎಂದು ಹೇಳಿ ಪರ್‌ಮಿಟ್ ತೆಗೆದುಕೊಳ್ಳುತ್ತಾರೆ. ಇದಕ್ಕೆ ರಿಜಿಸ್ಟರ್ ಇಟ್ಟಿದ್ದೀರಾ ? ಈ ಕ್ಲಾಜಿ ನಿಂದ ಬಹಳ ಅನ್ಯಾಯ ವಾಗುತ್ತದೆ. ಇಂಥ ಲಾ ಮಾಡುವುದಾದರೆ ಆತ್ಮಶುದ್ಧಿಯಿಂದ ಮಾಡ ಬೇಕು. ಈ ಕ್ಲಾಜಿನಿಂದ ದೇಶಕ್ಕೆ ಅನ್ಯಾಯವಾಗುತ್ತದೆ. ಇದನ್ನು ಯೋಚನೆ ಮಾಡಬೇಕು ನೀವು.

ಇನ್ನು Clause 36 authorisation for sacramental purposes. ಇದರಲ್ಲಿ The State Government, or subject to its control, the Deputy Commissioner may grant any authorisation to any person for the use of liquor for sacramental purposes. ಈ ಕಾಲಮಿನ ಪ್ರಕಾರ ಪೂಜೆಗೋಸ್ಕರ ಮದ್ಯ ಬೇಕೆಂದು ತಿಳಿದರೆ ಎಷ್ಟು ಕೊಡುತ್ತೀರಿ ? ನಾಲ್ಕು ಗಡಿಗೆಯಷ್ಟು ಕೊಡುತ್ತೀರಾ ? ದೇವಸ್ಥಾನದಲ್ಲಿ ಭಕ್ತರು ಅನೇಕರು ಇದ್ದಾರೆಂದು 10 ಅಥವಾ 100 ಬಿಂದಿಗೆ ಹೆಂಡ ಕೊಡುತ್ತೀರಾ ? ಹೆಂಡ ಕುಡಿಯದ ದೇವರ ಹೆಸರಿನಲ್ಲಿ ಜನರಿಗೆ ಕುಡಿಯುವುದಕ್ಕೆ ಹೆಂಡ ಕೊಡುತ್ತೀರಾ ? ದೇವರು ಇವನ್ನು ಮೆಚ್ಚುತ್ತಾನೆಯೇ ? ದೇವರ ಹೆಸರಿನಲ್ಲಿ ಮಾಡುವ ಇದೊಂದು ದೊಡ್ಡ ಅನ್ಯಾಯ ಆದುದರಿಂದ ಇದು ಸರಿಯಾಗಿಲ್ಲ,

ಇದಲ್ಲದೆ ಟೂರಿಸ್ಟರಿಗೆ ಪರಮಿಟ್ ಕೊಡುವುದು ಸಹ ಸರಿಯಾಗಿಲ್ಲ. ನಾವು ಮೈಸೂರು ದೇಶದವರು ಹೊರಗೆ ಹೋದರೆ ನಮಗೆ ಪರ್ಮಿಟ್ ಕೊಡುತಾರೆಯೇ ? ಬೇರೆ ಪ್ರಾಂತಗಳಲ್ಲಿ ಈ ರೀತಿ ಪರ್ಮಿಟ್ ಕೊಡುವುದಿಲ್ಲ, ಆದುದರಿಂದ ಈ ಪ್ರೊವಿಜನ್ ಇರುವುದು ಸರಿಯಾಗಿಲ್ಲ.

ಇನ್ನು ಕ್ಲಾಜ್ 42 ಪ್ರಕಾರ mhowra flowers ಅಂದರೆ ಹಿಪ್ಪೇ ಹೂವನ್ನು ಗುಡಿಸ ಕೂಡದು, ಮನೆಯಲ್ಲಿ ಇಡಕೂಡದು ಬೇರೆ ಕಡೆ ತೆಗೆದುಕೊಂಡು ಹೋಗಕೂಡದು ಎಂದಿದೆ. ಇದನ್ನೇನಾದರೂ ಜಾರಿಗೆ ತಂದರೆ ತಲೆ ಕೂಡ ಬೇಕಾಗುತ್ತದೆ. ಹಿಪ್ಪೇ ಹೂವಿನಿಂದ ಇಂಡಿಯಾ ದೇಶದಲ್ಲಿ ಲಿಕರ್ ಮಾಡುವುದು ಸಾಧ್ಯವಿಲ್ಲ, ಅದನ್ನು ಪರದೇಶಕ್ಕೆ ಕಳಿಸಲಾಗುತ್ತದೆ. ಅಲ್ಲಿ ಲಿಕರ್ ತಯಾರುಮಾಡುತ್ತಾರೆ. ಹಿಪ್ಪೇ ಹೂವಿನಿಂದ ಒಳ್ಳೆ ಗೊಬ್ಬರ ತಯಾರಾಗುತ್ತದೆ. ಹೆಚ್ಚು ಆಹಾರ ಬೆಳೆಯುವುದಕ್ಕೆ ಗೊಬ್ಬರ ಅಭಾವ ಉಂಟಾಗಿದೆ. ಈ ರೀತಿ ಮುಟ್ಟಗೋಲು ಹಾಕುವುದು ಸರಿಯಲ್ಲ, ಆದ್ದರಿಂದ ಈ ಕ್ಲಾಜ ಡಿಲೀಟ್ ಮಾಡಬೇಕು. ಈ ಕ್ಲಾಜಿನಲ್ಲಿ ಒಂದು ನ್ಯೂನತೆಯಿದೆ. ಫ್ಯಾಮಿಲಿಯಲ್ಲಿ ಯಾರು ಯಾರು ಬರುತ್ತಾರೆ ಎಂದು ಹೇಳುವಾಗ್ಗೆ ಸರ್ವೆಂಟ್ಸ್ ಸೇರಿಸಿಲ್ಲ. Servents ಸೇರಿಸಬೇಕು.

ಇನ್ನು Section 43 ಈ ಸಭೆಯಲ್ಲಿ ನಮ್ಮ ಅಕ್ಕತಂಗಿಯರು ಇದ್ದಾರೆ. ಅವರು ನನ್ನ ಭಾಷಣ ಕೇಳುತ್ತಿದ್ದಾರೆ. ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ಈ ಸೆಕ್ಷನ್ ದುರುಪಯೋಗ ಮಾಡಿಕೊಳ್ಳುತ್ತಾರೆ. ಹೆಂಡ ಕುಡಿದಿದ್ದಾನೆ ಎಂದು ಪತ್ತೆಹಚ್ಚುವುದಕ್ಕೆ ರಕ್ತ ಪರೀಕ್ಷೆ

ಮಾಡಬೇಕೆಂದು ಹೇಳಿದೆ. ಗಂಡ ಹೆಂಡತಿಯರ ಮೇಲಿನ ದ್ವೇಷದಿಂದ ನೀಚರು ಹೊಡೆದು ಬಡೆದು ಮೈಮೇಲೆ ಹೆಂಡ ಹಾಕಿ ಈ ರಕ್ತ ಪರೀಕ್ಷೆಯ ನೆಪದಿಂದ ಬಲಿಹಾಕುತ್ತಾರೆ. ಇದು ಬಹಳ ಅನ್ಯಾಯ ಮಾಡುವುದು. ಇದನ್ನು ತಪ್ಪಿಸಬೇಕು ಯಾರ ಅನುಮತಿಇಲ್ಲದೆ ಅವರನ್ನು ರಕ್ತ ಪರೀಕ್ಷೆಗೆ ಗುರಿಮಾಡಲು ಯಾರ ಕಾನೂನು ಹೇಳುವುದಿಲ್ಲ.

ಇನ್ನು Clause 43 ಯಲ್ಲಿ molasses ಬಗ್ಗೆ ಹೇಳಿದೆ. ಇದಕ್ಕೆ ಕನ್ನಡದಲ್ಲಿ ಕಾಕಂಬಿ ಎನ್ನುತ್ತಾರೆ. ಮಲೆನಾಡಿನಲ್ಲಿ ಬೆಲ್ಲ ಗಟ್ಟಿಯಾಗಿ ನಿಲ್ಲುವುದಿಲ್ಲ ಆದ್ದರಿಂದ ಕಾಕಂಬಿ ಮಾಡಿ ಇಟ್ಟಿರುತ್ತಾರೆ. ಹೊಸ ವರ್ಷದಲ್ಲಿ ಮಲೆನಾಡು ಪ್ರದೇಶದಲ್ಲಿ ಗೌರಿಹಬ್ಬಕ್ಕೆ ಹೆಣ್ಣುಮಕ್ಕಳಿಗೆ ಕಾಕಂಬಿ ಕಳಿಸಿಕೊಡುವ ಪದ್ಧತಿಯಿದೆ. ಇದನ್ನು ತಪ್ಪಿಸುತ್ತೀರಾ ? ಇದು ತೀರಾ ಅನ್ಯಾಯ ಇಂಥಾ ಸರಕಾರ ಬಡವರ ಉದ್ಧಾರ ಮಾಡುತ್ತಾರೆಯೇ ? ತಂದೆತಾಯಿಗಳು ಹಬ್ಬಕ್ಕೆ ಹೆಣ್ಣು ಮಕ್ಕಳಿಗೆ ಕಾಕಂಬಿ ಕಳಿಸುವ ಪದ್ಧತಿಯನ್ನು ತಪ್ಪಿಸಬೇಡಿ. ದಯವಿಟ್ಟು ಈ ಸೆಕ್ಷನ್ ತೆಗೆದು ಹಾಕಬೇಕು. ಒಂದು ವೇಳೆ ಇದನ್ನು ಮಾಡದೇ ಹೋದರೆ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಓಟು ದೊರಕಿಸಿ ಚುನಾಯಿತರಾಗಿ ನೀವು ಬರುವುದು ಸಾಧ್ಯವಿಲ್ಲ. ಸೆಕ್ಷನ್ 75ರ ಪ್ರಕಾರ ಕಠಿಣ ಶಿಕ್ಷೆಗೆ ವಿಧಿಸಲಾಗಿದೆ, ಆದುದರಿಂದ 109ನೇ ಸೆಕ್ಷನ್ ದಯವಿಟ್ಟು ತೆಗೆದು ಹಾಕಬೇಕು. ಕ್ಲಾಜ್ 80 ರಲ್ಲಿ ಸುಳ್ಳುಸುದ್ದಿಕೊಡುವವರಿಗೆ ಶಿಕ್ಷೆ ಕೊಡಬೇಕೆಂದು ಹೇಳಿದ್ದಾರೆ. ಇವರಿಗೆ ಇಂಡಿಯನ್ ಕ್ರಿಮಿನಲ್ ಪ್ರೊಸೀಜರ್ ಕೋಡ್ S. 182 ಅರ್ಥವಾಗಿಲ್ಲವೆಂದು ಕಾಣುತ್ತದೆ. Under Section 182, a Magistrate or any Enquiring officer can pass orders againast a person giving also information. Where is the necessity for this clause here? This is redundant

Clause 81 and 82 are self contradictrory.

ಕ್ಲಾಜ್ 90 ರಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ 562ನೆಯ ಸೆಕ್ಷನ್ ಪ್ರಕಾರ ವಾರನಿಂಗ್ ಆಗ ಕೊಡದು ಎಂದು ಹೇಳಿದ್ದೀರಿ. ಇದರಿಂದ "you are taking the powers of the court also why? ಶ್ರೀಮತಿ ನಾಗರತ್ನಮ್ಮನವರು ಹೇಳಿದಹಾಗೆ ಮೊದಲು ಮನೆಯ ಯಾಜಮಾನನಾದವನು ಮಾತ್ರ ಕುಡಿಯುತ್ತಿದ್ದ. ಆದರೆ ಈಗ ಮನೆಯೊಳಗೇ ತಯಾರು ಮಾಡುವುದರಿಂದ ಹೆಂಗಸರು, ಮಕ್ಕಳು ಎಲ್ಲರೂ ಕುಡಿಯುತ್ತಾರೆ ಇದಲ್ಲದೆ ಮಕ್ಕಳ ಮೂಲಕ ಮಾರುತ್ತಾರೆ ಆದುದರಿಂದ ಮೊಟ್ಟಮೊದಲು ಎಚ್ಚರಿಕೆ (worning) ಕೊಡುವುದನ್ನು ಬಿಟ್ಟು ಏಕದಂ ಅವರನ್ನು ತೆಗೆದು ಕೊಂಡು ಹೋಗಿ ಶಿಕ್ಷೆ ಮಾಡಿಸಿದರೆ ರಕ್ತಪಾತವಾಗುತ್ತದೆ.

104ನೆಯ ಕ್ಲಾಜಿನಲ್ಲಿ Any police officer can arrest ಎಂದು ಅಧಿಕಾರ ಕೊಟ್ಟಿದ್ದೀರಿ. Constable is a police officer of the lost grade. ಇಂಥವರಿಗೆ ಅರೆಸ್ಟ್ ಮಾಡುವ ಅಧಿಕಾರವನ್ನು ಕೊಡುತ್ತೀರಾ?

109ನೇಯ ಕ್ಲಾಜ್ ಪ್ರಕಾರ ವೈದ್ಯಕೀಯ ಪರಿಕ್ಷೆಗೆ ಗುರಿಪಡಿಸಲು ಅವಕಾಶಮಾಡಿದ್ದೀರಿ. ಇದರ ಪ್ರಕಾರ ರಕ್ತವನ್ನು ಪರೀಕ್ಷೆಮಾಡಲು ತೆಗೆದು ಕೊಳ್ಳಬಹುದು. ಇದು ಸರಿಯಿಲ್ಲ ಇದರಿಂದ ಮುಂದೆ ರಕ್ತಪಾತಕ್ಕೆ ಅವಕಾಶವಾಗುತ್ತದೆ. ಬಿಳಿಯಜನ ಹೋದರು, ಬಿಳಿ ಟೋಪಿಬಂತು ಆದರೂ 186ನೆಯ ಸೆಕ್ಷನ್ ಏಕೆ ಇರಬೇಕು? ಇದರ ಪ್ರಕಾರ ಶಿಕ್ಷೆ ವಿಧಿಸಬೇಕೆನ್ನುವುದು ಸರಿಯಲ್ಲ. ಕಾಂಗ್ರೆಸ್ ನವರಿಗೆ ವಿರೂಧವಾಗಿ ಯಾರಾದರೂ ನಡೆದರೆ ಅವರಿಗೆ ತೊಂದರೆ ಮಾಡುವುದಕ್ಕೆ ಇದನ್ನು ತಂದಿದ್ದೀರಿ.

It is our fundamental right that has been interfered by the congress Government.

(ಶ್ರೀ ಡಿ. ಎಚ್. ಪುಟ್ಟಣ್ಣ)

ಫೈನಾನ್ಸಿಯಲ್ ಮೆಮೊರಂಡಂನಲ್ಲಿ ಇದಕ್ಕೆ ಎಷ್ಟು ಖರ್ಚಾದಗುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಈ ವಿಧೇಯಕವನ್ನು ಏಕೆ ತರಬೇಕಾಗಿತ್ತು. ಎಷ್ಟು ಖರ್ಚಾಗಬಹುದು ಎಂಬುದನ್ನು ತಿಳಿಸದೆಇರುವಾಗ ಈ ವಿಧೇಯಕವು ಅಪೂರ್ಣವಾಗುತ್ತದೆ. The Bill is not complete. It is a defective Bill withdraw it.

ಹದಿನಾಲ್ಕು ವರ್ಷಗಳಲಾಗಾಯ್ತು ಕಾಂಗ್ರೆಸ್‌ಸರ್ಕಾರ ದರ್ಬಾರು ನಡೆಸುತ್ತಿದೆ. ಇವರಿಗೆ ಇವೆಲ್ಲ ಏಕೆತಿಳಿಯಲಿಲ್ಲ ಚುನಾವಣೆಗಳು ಹತ್ತಿರ ಬರುತ್ತಿವೆ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ ಎಂದರೆ ಅದಕ್ಕೆ ಒಪ್ಪದೆ ಈಗಲೇ ಪಾಸ್ ಮಾಡಬೇಕೆಂದು ಹೇಳುತ್ತಾರೆ. ಈ ವಿಧೇಯಕವನ್ನು ತರುವುದರಿಂದ ಜನರ ಆರೋಗ್ಯವನ್ನು ಉತ್ತಮ ಪಡಿಸುತ್ತೇವೆಂದು ಹೇಳಿದ್ದಾರೆ. ಯಾವ ಆಸ್ಪತ್ರೆಗಳಿಗೆ ಹೋಗಿ ನೋಡಿದರೂ ರೋಗಿಗಳು ಜಾಸ್ತಿಯಾಗಿದ್ದಾರೆ ಕುಡಿಯುವವರು ಜಾಸ್ತಿಯಾಗಿರುವುದರಿಂದ ಇವರ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಬಹುದು.

ದೇಶದ ಹಿತರಕ್ಷಣೆಗೆ ಮುಖ್ಯವಾದ ಪೋಲೀಸ್ ಕಾನೂನನ್ನು ತಂದಿಲ್ಲ, ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳು ಮುನಿಸಿಪಾಲಿಟಿಗಳು ಹಾಳಾಗುತ್ತಿವೆ ಇದಕ್ಕೆ ಸಂಬಂಧಪಟ್ಟ ಕಾನೂನನ್ನು ತರಲಿಲ್ಲ. Beggar Relief Act ತರಲಿಲ್ಲ. ಈ ಬಗ್ಗೆ ನಾನು ಎಷ್ಟೋಸಲ ಕಾಗದ ಬರೆದರೂ ಇದನ್ನು ಸಭೆಯಮುಂದೆ ಸಹ ಮಂಡಿಸಿಲ್ಲ ಬಹಳಮುಖ್ಯವಾಗಿ ಆಗಬೇಕಾದ ಕಾನೂನುಗಳು . ಬಹಳವಿದೆ. ಮೊನ್ನೆ ತಾನೇ Land Acquisition Act ಬೇಗ ಪಾಸ್ ಮಾಡಿಸಿಕೊಂಡಿರಿ. ಏಕೆ ಹೀಗೆಲ್ಲ ಮಾಡುತ್ತಿದ್ದೀರಿ ನಿಮಗೆ ಕೆಲಸಮಾಡಲು ಶಕ್ತಿಯಿಲ್ಲವೇ? ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ಶಕ್ತಿಇಲ್ಲ, ದೇಶವನ್ನು ಆಳುವುದಕ್ಕೆ ಶಕ್ತಿಇಲ್ಲ. ನಿಮಗೆ ಬಹುಮತವಿದೆಯೆಂದು ಹೀಗೆಲ್ಲ ಮಾಡಬೇಡಿ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಡಿ. ಈ ವಿಧೇಯಕವು ಈಗಿರುವಂತೆಯೇ ಪಾಸ್ ಆದರೆ ಬಹಳ ತೊಂದರೆಯಾಗುತ್ತದೆ ತನಗೆ ವಿರೋಧವಾಗಿರುವವರು ಯಾರಾದರೂ ಇದ್ದರೆ, ಒಂದು ಸೀಸೆ ಮದ್ಯವನ್ನು ತೆಗೆದು ಕೊಂಡು ಹೋಗಿ ಅವರ ಹುಲ್ಲುಮೆದೆಯೊಳಗೆ ಇಟ್ಟು ಪೋಲಿಸಿನವರನ್ನು ಕರೆದು ಕೊಂಡು ಹೋಗಿ ಕೇಸ್ ಹಾಕಿಸುತ್ತಾರೆ. ದೇಶದಲ್ಲಿ ದ್ವೇಷಾಸೂಯೆಗಳು ಜಾಸ್ತಿಯಾಗುತ್ತಿದೆ. ದಯವಿಟ್ಟು ಚೆನ್ನಾಗಿ ಆಲೋಚನೆ ಮಾಡಿ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡಿ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಂತೆ ಗಂಡೂಅಲ್ಲ ಹೆಣ್ಣುಅಲ್ಲ ಅರ್ಧನಾರೀಶ್ವರ ಎನ್ನುವಂತೆ ಆಗಿದೆ. ಈ ವಿಧೇಯಕವನ್ನು ಚೆನ್ನಾಗಿ ಆಲೋಚನೆ ಮಾಡಿ ಪಾಸ್‌ಮಾಡಿಸಬೇಕು ಎಂದು ತಿಳಿಸಿ, ನಾಲ್ಕು ಮಾತನಾಡಲು ಅವಕಾಶಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ಕೃತಜ್ಞನಾಗಿದ್ದೇನೆ.

†ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೆ, ಈ ವಿಷಯದಲ್ಲಿ ಸಾಕಷ್ಟು ಜನ ಮಾತನಾಡಿದ್ದಾರೆ. ನಾನು ಕೂಡ ಮೊದಲಿನಿಂದಲೂ ಇದಕ್ಕೆ ವಿರೋಧವಿದ್ದವನೆ. ಕಾರಣ ವಿಷ್ಟು ಪಾನನಿರೋಧವು ಯಶಸ್ವಿಯಾಗುತ್ತಿದ್ದಿಲ್ಲ ವೆನ್ನುವುದನ್ನು ಖಾತರಿಮಾಡಿಕೊಂಡು ಇದಕ್ಕೆ ವಿರೋಧವಾಗಿದ್ದೇ, ನಿಸರ್ಗನಿಯಮದ ಪ್ರಕಾರ ತೆಗೆದುಕೊಂಡರೂ, ಧರ್ಮ, ವೇದ, ಶಾಸ್ತ್ರ ಇವನ್ನು ನೋಡಿಕೊಂಡು ಬಂದರೂ ದೇವತೆಗಳಕಾಲದಿಂದಲೂ ಸುರಾಪಾನ ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳು ಹಿಂದಿನ ಹೈದರಾಬಾದ್ ಭಾಗದಿಂದ ಬಂದವರು. ಅದು ಮೊದಲಿನಿಂದಲೂ ಕುಡಿಯುವುದಕ್ಕೂ ಅವಕಾಶವಿದ್ದ ಪ್ರದೇಶ. ಆದರೆ ನಮ್ಮ ಭಾಗದಲ್ಲಿ ಎಂದರೆ ಬಿಜಾಪುರ ಜಿಲ್ಲೆಯೊಳಗೆ, ಬೊಂಬಾಯಿ ರಾಜ್ಯದಲ್ಲಿ 1937ರಲ್ಲಿ ಪಾನಮಾಡುವುದನ್ನು ರದ್ದುಮಾಡಿದಾಗಿನಿಂದಲೂ ಪಾನಪ್ರತಿಬಂಧವಿದೆ. ದರೆ ಅಲ್ಲಿಯ ಪರಿಸ್ಥಿತಿಯಾವರೀತಿ ಇದೆ

ಎನ್ನುವುದನ್ನು ಬಿಜಾಪುರ ಜಿಲ್ಲೆಯಲ್ಲಿ ಶಾಸನ ಸಭಾಸದಸ್ಯರಿಗೂ ಗೊತ್ತಿದೆ. ಅಲ್ಲಿಯ ಜನರು ಯಾರೂ ಕುಡಿಯುವುದಿಲ್ಲವೆಂದು ಯಾರಾದರೂ ಬಿಜಾಪುರ ಜಿಲ್ಲೆಯಿಂದ ಬಂದಿರುವ ವಿಧಾನ ಸಭಾಸದಸ್ಯರು ಹೇಳಿದರೆ ನಾನು ಇವೊತ್ತು ಮಾತನಾಡುವುದನ್ನು ಬಿಡುತ್ತೇನೆ. ನಾನು ಹೋದಸಲ ಕೂಡ ಒಂದು ವಿಷಯವನ್ನು ಹೇಳಿದ್ದೆ. ಸೂರ್ಯೋದಯಕ್ಕೆ ಮುಂಚೆ ತೆಗೆದು ಪಾನ ಮಾಡಿದರೆ ಅದು 'ನೀರಾ' ಆಗುತ್ತದೆ. ಬೆಳಿಗ್ಗೆ ಆರೂವರೆ ಘಂಟೆ, ಏಳುಘಂಟೆ ಆದಮೇಲೆ ಅದು ಹೆಂಡವಾಗುತ್ತದೆ. ಆ ರೀತಿಯಾಗದಂತೆ ಅದಕ್ಕೆ ಏನೇನೋಮಾಡುತ್ತೇವೆಂದು ಹೇಳಿದ್ದರು ಈಗ ಏನೇನೋಮಾಡಿ ಕೆಲವರಮನೆಗೆ ಪಾರ್ಸಲ್ ಮಾಡುತ್ತಿದ್ದಾರೆ. ಈ ವಿಚಾರವನ್ನು ಹೋದಸಲ ಹೇಳಿದಾಗ ಮಾನ್ಯ ಚೆನ್ನಬಸಪ್ಪನವರು ಹಾಗೆಮಾಡುತ್ತೇವೆ, ಹೀಗೆಮಾಡುತ್ತೇವೆಂದು ಹೇಳಿದರು. ಅವರು ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಮಂಗಳೂರು, ಸ್ಥಳಗಳಿಗೆಲ್ಲ ಹುಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವಂತೆ ಹೋದರು. ಏನೇನೊ ಮಾಡಿದರು ಈಗ್ಗೆ 15 ದಿವಸದ ಕೆಳಗೆ ನಡೆದಂಥ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ ನನ್ನ ಮಿತ್ರರಾದಂಥ ಸುಂಠಣಕರರು ತಾವು ಏಳು ದಿವಸ ಜೈಲಿನೊಳಗಿದ್ದಾಗ ಪಾನ ನಿರೋಧ ಸಂಬಂಧದ ಅಪರಾಧಕ್ಕಾಗಿ ಬಂದಿದ್ದ ಒಬ್ಬ ಖೈದಿ ತಾನು ತಿಂಗಳಿಗೆ ಪೋಲೀಸರಿಗೆ ಪ್ರೊಹಿಬಿಷನ್ ಸಲುವಾಗಿ ತಿಂಗಳಿಗೆ 800 ರೂಪಾಯಿ ಲಂಚ ಕೊಡಬೇಕಾಗಿದೆಯೆಂದು ತಮಗೆ ತಿಳಿಸಿದನೆಂದು ಹೇಳಿದಾಗ, ಶ್ರೀ ಚನ್ನಬಸಪ್ಪನವರು ಜವಾಬ್ದಾರಿಯುತ ಜನರಾದ ನೀವು ನಮಗೆ (ಸರ್ಕಾರಕ್ಕೆ) ತಿಳಿಸಬೇಕಾಗಿತ್ತೆಂದು ಹೇಳಿದರು. ವಿರೋಧಪಕ್ಷದವರು ಸರ್ಕಾರದ ಗಮನಕ್ಕೆ ತಂದ ವಿಷಯಗಳೇನೆ ಸರ್ಕಾರದವರು ಎಷ್ಟು ಮಾನ್ಯತೆ ಕೊಡುತ್ತಾರೆಂಬುದು ನಮಗೆ ಗೊತ್ತು; ಅದಕ್ಕೆ ಎಷ್ಟು ಉದಾಹರಣೆಗಳನ್ನು ಬೇಕಾದರೂ ಕೊಡಬಲ್ಲೆ. ಮಾನ್ಯ ಸಚಿವ ಸುಬ್ರಹ್ಮಣ್ಯರವರು ಬಿಜಾಪುರಕ್ಕೆ ಬಂದಿದ್ದಾಗ ಹತ್ತು ಸಾವಿರ ಜನರು ಪಬ್ಲಿಕ್ ಮೀಟಿಂಗ್ ಮಾಡಿ ಒಬ್ಬ ಅಧಿಕಾರಿಯನ್ನು ತೆಗೆಯಬೇಕೆಂದು ಹೇಳಿದಾಗ, ಅವರು ಅಂಥ ಚಲೋ ಅಧಿಕಾರಿಯೇ ಇಲ್ಲವೆಂದು ಹೇಳಿದರು ಯೋಗ್ಯ ರೀತಿಯಿಂದ ನಡೆಯುವುದು ನಿಮ್ಮ ಕರ್ತವ್ಯ. ಎರಡು ಕೋಟಿ ಜನರು ನೀವು ಯಾವ ರೀತಿ ನಡೆದುಕೊಳ್ಳುತ್ತಿದ್ದೀರಿ ಎನ್ನುವುದನ್ನು ನೋಡುತ್ತಿದ್ದಾರೆ. ಪಾನನಿರೋಧ ಯಶಸ್ವಿಯಾಗುವುದಿಲ್ಲ, ಕುಡಿಯೋರು ಕುಡಿಯುತ್ತಾರೆ. ಕುಡಿಯುವವರನ್ನು ಹಿಡಿಯಲಿಕ್ಕೆ ಹೋದವರು ಕುಡಿಯುತ್ತಾರೆ; ಹಿಡಿಯೆಂದು ಕುಡಿದು ಹೋಗಿ ಕುಡಿಯುವವರನ್ನು ಹಿಡಿಯುತ್ತಾರೆ! ಕುಡಿದವರು ಕುಡುಕರನ್ನು ಹಿಡಿದುಕೊಟ್ಟಿದ್ದಾರೆ. (ನಗು)

ಅಧ್ಯಕ್ಷರು.— Order, order. ನೀವು ಯಾವ ಕೆಟಗೆರಿಯೊಳಗೆ ಬರುತ್ತೀರಿ?

ಶ್ರೀ ಬಿ. ಕೆ. ನಾಗೂರ್.—ಹೀಗಿರುವುದರಿಂದ ಪ್ರೊಹಿಬಿಶನ್ ಸಕ್ಸೆಸ್ ಫುಲ್ ಆಗುವುದಿಲ್ಲ. ಹೊಸದಾಗಿ ಮದುವೆಯಾದ ಹುಡುಗಿ ಗಂಡನ ಹೆಸರನ್ನು ಹೇಳು ಎಂದಾಗ ಸೆರಗು ಕಚ್ಚಿಕೊಂಡು ನಾಚಿಕೆ ಪಟ್ಟುಕೊಳ್ಳುವಂತೆ, ನಮ್ಮ ಪ್ರೊಹಿಬಿಶನ್ ಮಂತ್ರಿಗಳು ಪ್ರೊಹಿಬಿಶನ್ನನ್ನು ಹಿಂತೆಗೆದುಕೊಳ್ಳುವುದಕ್ಕೆ ನಾಚಿಕೆ ಪಟ್ಟುಕೊಳ್ಳುವುದು ಬೇಡ. ಪಿ. ಎಸ್. ಪಿ. ಯವರೇ ಆಗಲಿ, ಇಂಡಿಪೆಂಡೆಂಟ್ ರವರೇ ಆಗಲಿ, ಕಾಂಗ್ರೆಸ್ಸಿನವರೇ ಆಗಲಿ, ಯಾರೇ ಆಗಲಿ, ತಮ್ಮ ತಮ್ಮ ಏರಿಯಾದೊಳಗೆ ಕುಡಿಸದೆ ಯಾರೂ ಆರಿಸಿ ಬಂದಿಲ್ಲ. ಯಾವ ಏರಿಯಾದಲ್ಲಿ ಕುಡಿಯತಕ್ಕಂಥ ಜನರಿದ್ದಾರೋ, ಅಲ್ಲಿ ಕುಡಿಯುವುದಕ್ಕೆ ಕೊಡಿಸದೆ, ಏನು ಭಾಷಣ ಮಾಡಿದರೂ ಆರಿಸಿ ಬರುವುದಕ್ಕಾಗುವುದಿಲ್ಲ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ನನ್ನ ಕ್ಷೇತ್ರದಲ್ಲಿ ನಾನು ಯಾರಿಗೂ ಒಂದು ತೊಟ್ಟು ಕುಡಿಸಿ ಆರಿಸಿ ಬಂದಿಲ್ಲ.

ಶ್ರೀ ಬಿ. ಕೆ. ನಾಗೂರ್.—ತಾವು ಕುಡಿಸದಿರಬಹುದು ತಮ್ಮ ಅಭಿಮಾನಿಗಳು ಕುಡಿಸಿರಬಹುದು. ನಾನು ನಿಜಸ್ಥಿತಿ ಹೇಳುತ್ತಿದ್ದೇನೆಯೇ ವಿನಃ ವೈಯಕ್ತಿಕವಾಗಿ ಯಾರ ಮೇಲಿನ ದ್ವೇಷಾಸೂಯೆಯಿಂದ ಹೇಳುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ, ನೀವು ಈ ಮಸೂದೆಯನ್ನು ಮಾಡುತ್ತಿರುವುದು ಬಹಳ ವ್ಯಸನವಾಗಿದೆ. ಒಂದು ಉದಾಹರಣೆ ಹೇಳುತ್ತೇನೆ, ಬಿಜಾಪುರ

(ಶ್ರೀ ಬಿ. ಕೆ. ನಾಗೂರ್)

ಚಿನ್ನೆಯೊಳಗೆ ಒಂದು ಡ್ರಮ್ಮನ್ನು ಒಂದು ಸುತ್ತು ತಿರುವಿದರೆ ನೀರು ಬರುತ್ತದೆ, ಎರಡು ಸುತ್ತು ತಿರುವಿದರೆ " ಕಾಂಗ್ರೆಸ್ " ಬರುತ್ತದೆ.

ಒಬ್ಬ ಸದಸ್ಯರು.—" ಕಾಂಗ್ರೆಸ್ " ಎಂದರೇನು ?

ಶ್ರೀ ಬಿ. ಕೆ. ನಾಗೂರ್.—' ಕಾಂಗ್ರೆಸ್ ' ಎಂದರೆ ಕಳ್ಳಭಟ್ಟಿ.

ಅಧ್ಯಕ್ಷರು.—ಆರ್ಡರ್, ಆರ್ಡರ್. ಮೂರನೆಯ ಸುತ್ತು ತಿರುವಿದರೆ ಸ್ವತಂತ್ರ ಪಾರ್ಟಿ ಬರುತ್ತದೆ. (ನಗು)

ಶ್ರೀ ಬಿ. ಕೆ. ನಾಗೂರ್.—ಇದು ಇರುವ ಸಂಗತಿ. ಈ ಪ್ರೊಹಿಬಿಷನ್ ಸಕ್‌ಸೆಸ್ ಫುಲ್ ಆಗುವುದಿಲ್ಲ. ಬರತಕ್ಕ ಆದಾಯ ಕಳೆದುಕೊಂಡು ಪ್ರೊಹಿಬಿಷನ್ ನಾಟಕ ಆಗುವುದರೊಳಗೆ ಅರ್ಥವಿಲ್ಲ. ಈ ವಿಧೇಯಕರನ್ನು ಹಿಂತೆಗೆದುಕೊಳ್ಳಬೇಕೆಂದು ಪಾಟೀಲರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಯಶಸ್ವಿಯಾಗುವುದಿಲ್ಲ. ಬೊಂಬಾಯಿನಲ್ಲಿ ಪ್ರೊಹಿಬಿಷನ್ ಮುಂದೆ ಡಾಕ್ಟರ್ ಗಿಲ್ಡರವರ ಕಾಂಪೌಂಡಿನೊಳಗೇ ಬಾಟಲುಗಳು ಸಿಕ್ಕಿ ಒಂದು ಕೇಸಾಯಿತು.

ಅಧ್ಯಕ್ಷರು.—ಮಂತ್ರಿಗಳ ನಿವಾಸದ ಕಾಂಪೌಂಡಿನೊಳಗೆ ಬೇಕಾದಷ್ಟು ಜನರು ಇರುತ್ತಾರೆ. ಅವರ ಮನೆಯ ಕಾಂಪೌಂಡಿನೊಳಗೆ ಸರ್ವೆಂಟುಗಳೂ ಇರುತ್ತಾರೆ. ಆದುದರಿಂದ ಮಂತ್ರಿಗಳು ಮಾಡಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಕೆ. ನಾಗೂರ್.—ಅಂಥ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಅಂಥ ಸರ್ವೆಂಟುಗಳನ್ನು ಏಕೆ ಸೇರಿಸಿಕೊಂಡರು !

ಅಧ್ಯಕ್ಷರು.—ಆ ಕೇಸಿನಲ್ಲಿ ಅಪರಾಧಿಗಳನ್ನು ಸ್ವತಃ ಹಿಡಿದು ಕೊಟ್ಟವರು ಡಾಕ್ಟರ್ ಗಿಲ್ಡರವರೇ ?

ಶ್ರೀ ಬಿ. ಕೆ. ನಾಗೂರ್.—ಮೊದಲೇ ಹಿಡಿದು ಕೊಡಬೇಕಾಗಿತ್ತು.

ಅಧ್ಯಕ್ಷರು.—ಗೊತ್ತಾಗುವುದಕ್ಕೆ ಮುಂಚೆ ಯಾರಾದರೂ ಹಿಡಿದು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಕೆ. ನಾಗೂರ್.—ಸುಮ್ಮನೆ ಬರತಕ್ಕಂಥ ಹಣ ಕಳೆದುಕೊಂಡು ಈ ನಾಟಕದಿಂದ ಯಾವ ಉಪಯೋಗವಾಗುವುದಿಲ್ಲ. ಇದು ಯಶಸ್ವಿಯಾಗುವುದಿಲ್ಲ, ಆಗಲು ಶಕ್ಯವಿಲ್ಲ. ಕಾಂಗ್ರೆಸ್ ಬಾಲ ಹಿಡಿದುಕೊಂಡಿರತಕ್ಕಂಥ ಕೆಲವು ಪೇಪರುಗಳಲ್ಲಿ ಫ್ರಂಟ್ ಪೇಜಿನಲ್ಲಿ ಪ್ರೊಹಿಬಿಷನ್ ಸಕ್‌ಸೆಸ್ ಫುಲ್ ಆಗಿದೆಯೆಂದು ಹಾಕಿಸಿಕೊಂಡರೆ ಏನೂ ಅರ್ಥವಿಲ್ಲ. ದುಡ್ಡನ್ನೂ ಕಳೆದು ಕೊಂಡಿರಿ; ಜನರಿಗೆ ಒಳ್ಳೆಯದು ಮಾಡುವ ಪರಿಸ್ಥಿತಿಯೂ ಬರಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರಲ್ಲಿ ಅಭಿಮಾನವಿದೆ: ಅವರಿಗೆ ಇನ್ನು ಆರು ತಿಂಗಳಿದೆ. ಈ ವಿಧೇಯಕರನ್ನು ಜಾರಿಗೆ ತಂದು ಏಕೆ ಕೆಟ್ಟ ಹೆಸರು ತೆಗೆದುಕೊಂಡು ಹೋಗುತ್ತೀರ, ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ವೈಯುಕ್ತಿಕವಾಗಿ ಏನೂ ಹೇಳುವುದಿಲ್ಲ. ಮಾನ್ಯ ಗೃಹಮಂತ್ರಿಗಳಾದ ಚನ್ನಬಸಪ್ಪನವರು ಕಳ್ಳಭಟ್ಟಿ ನಡೆಯುವ ಪ್ರದೇಶಗಳ ಮೇಲೆ ಧಾಳಿ ನಡೆಸಿರುತ್ತಾರೆ. ನಮ್ಮ ಬೊಂಬಾಯಿ ಕರ್ನಾಟಕದ ಕೆಲವು ಏರಿಯಾಗಳಿಗೆ ಅವರು ಬಂದು ಹೋದಮೇಲೆ, ಹೋಟೆಲುಗಳಲ್ಲಿ ನಾಲ್ಕು " ಚನ್ನಬಸಣ್ಣ " ಕಳುಹಿಸಿ ಕೊಡು ಎಂದು ಹೇಳುತ್ತಾರೆ. ಇವತ್ತಿನ ದಿವಸ ಹುಬ್ಬಳ್ಳಿ-ಧಾರವಾಡಗಳಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು " ಚನ್ನಬಸಣ್ಣ " ಎಂದು ಕರೆಯುವುದು ವಾಡಿಕೆಯಾಗಿ ಹೋಗಿ ಬಿಟ್ಟಿದೆ. (ನಗು) ಇವತ್ತು ಮಿನಿಸ್ಟರಿಗೆ ಒಂದು ಸಾವಿರ ಪಗಾರ ಬರಬಹುದು, ಆದರೆ ಇವತ್ತು ಪೋಲೀಸರಿಗೆ ಪಾನನಿರೋಧದಿಂದ ಬರುತ್ತಿರುವ ಮಾಮೂಲು ಕೇಳಿದರೆ ಮಂತ್ರಿಗಳು ಗಾಬರಿಯಾಗಿ ಬಿಡುತ್ತಾರೆ. ಏಳು-ಎಂಟು ಸಾವಿರ ರೂಪಾಯಿವರೆಗೂ ತಿಂಗಳಿಗೆ ಅವರಿಗೆ ಬರುತ್ತಿದೆ. ಇವತ್ತು ಚನ್ನಬಸಪ್ಪನವರು ಒಂದು, ಲಂಬಾಣಿ ತಾಂಡಾದ ಮೇಲೆ ಧಾಳಿ ಮಾಡಬೇಕೆಂದು

ಹೊರಟರೆ, ಪೋಲೀಸಿನವರೆ ಸಂಗಮ ಪದನಿಸ ಬಾರಿಸಿ ಧಾಳಿ ಮಾಡುವ ಸಮಾಚಾರವನ್ನು ಅವರಿಗೆ ತಲುಪಿಸಿಬಿಟ್ಟಿರುತ್ತಾರೆ. ಇನ್‌ಫರ್ಮೇಷನ್ ಕೊಟ್ಟು ಹೋದ ಮೇಲೆ, ಪೋಲೀಸಿನವನು ಬಂದುಕು ಹಿಡಿದುಕೊಂಡು ಕಳ್ಳಭಟ್ಟಿ ತಯಾರಾಗುವ ಮನೆಗೆ ಹೋಗುತ್ತಾನೆ. ಹೀಗಿರುವಾಗ ಪ್ರೊಹಿಬಿಷನ್ ಎಂದೆಂದಿಗೂ ಜಯವಾಗುವುದು ಶಕ್ಯವಿಲ್ಲ. ಉದಾಹರಣೆಗಳನ್ನು ಈ ಕಳ್ಳಬಟ್ಟಿ ವಿಚಾರದಲ್ಲಿ ಕೊಡಬೇಕಾದರೆ ಬೇಕಾದಷ್ಟು ಕೊಡಬಹುದು. ನನ್ನೊಡನೆ ಮಂತ್ರಿಗಳು ಬೇಕಾದರೆ ಬರಲಿ, ಎಲ್ಲೆಲ್ಲಿ ಯಾವ ಯಾವ ರೀತಿಯಾಗಿ ಕಳ್ಳಬಟ್ಟಿ ತಯಾರಾಗುತ್ತಿದೆ ಎನ್ನುವುದನ್ನು ತಮಗೆ ತೋರಿಸಿ ಕೊಡುತ್ತೇನೆ. ಪ್ರತಿಯೊಂದು ಮನೆಯಲ್ಲಿಯೂ ಈ ಕಳ್ಳಬಟ್ಟಿ ಮಾಡುತ್ತಿದ್ದಾರೆ, ಮೊದಲು ಮನೆಯೊಳಗೆ ಕದಮುಚ್ಚಿಕೊಂಡು ಕುಡಿಯುತ್ತಿದ್ದುದನ್ನು ಈಗ ಜನ ಇನ್ನೂ ಹೆಚ್ಚಾಗಿ ತೆಗೆದುಕೊಳ್ಳಲಿ ಎಂದು ಮತ್ತಷ್ಟೂ ಹೆಚ್ಚು ಮಾಡಿದ್ದೀರಿ. ಮೊದಲು ಕುಡಿಯುವವರು ಕಡಿಮೆ ಇದ್ದರು ಎಂದು ಕೇಳುತ್ತಿದ್ದೆವೆ, ಈಗ ಕುಡಿಯುವವರ ಸಂಖ್ಯೆ ಈ ಮಸೂದೆಯ ದೆಸೆಯಿಂದ ಹೆಚ್ಚಾಗುತ್ತದೆಯೇ ಹೊರತು ಇದರಿಂದ ಇನ್ನೇನೂ ಉಪಯೋಗವಾಗುವುದಿಲ್ಲ. ಅಲ್ಲದೆ ಜನರ ಆರೋಗ್ಯ ದೃಷ್ಟಿಯಿಂದಲೂ ಈ ರೀತಿಯಾಗಿ ಇಲ್ಲಿ ತಂದಿರುವ ಕಾನೂನು ನೋಡಿದರೆ ಬಹಳ ವ್ಯಸನವಾಗುತ್ತದೆ. ಮಾನ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರವರು ಹಳೆಯ ಮೈಸೂರಿನ ಭಾಗದಲ್ಲಿ ಎಷ್ಟು ಮಂದಿ ಕಳ್ಳಬಟ್ಟಿದಾರರಿದ್ದಾರೆ ಎನ್ನುವುದನ್ನು ನೋಡಿಕೊಂಡು ಬಂದಿದ್ದಾರೆಯೇ ! ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಮರ್‌ಕೆರಾ ಮತ್ತಿತರ ಕಡೆಗಳಿಗೆ ಹೋದ ಹಾಗೆ ಶ್ರೀಮಾನ್ ವೀರೇಂದ್ರ ಪಾಟೀಲರು ಹೋಗಿ ನೋಡಿಕೊಂಡು ಬಂದಿದ್ದರೆ ಅವರಿಗೆ ಪರಿಸ್ಥಿತಿ ಗೊತ್ತಾಗುತ್ತಿತ್ತು. ಹೀಗೆ ನೀವು ಪೋಲೀಸಿನವರಿಗೆ ಈ ಆಡಳಿತವನ್ನು ಕೊಟ್ಟು ನಡೆಸುತ್ತೇವೆ ಎಂದು ಹೇಳಲಿಕ್ಕೆ ಶಕ್ಯವಿಲ್ಲ. ಆದರಿಂದ ಈಗ ತಂದಿರುವ ಮಸೂದೆಯನ್ನು ಹಿಂತೆಗೆದುಕೊಂಡರೆ ಚೆನ್ನಾಗಿರುತ್ತದೆ. ಜನರನ್ನು ಕೆಡಿಸುವಂತಹ ಇಂತಹ ಮಸೂದೆಯನ್ನು ತರುವುದಕ್ಕೆ ಬದಲಾಗಿ ಮಂತ್ರಿಗಳಾದ ಶ್ರೀಮಾನ್ ಪಾಟೀಲರವರು ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಅವರನ್ನು ಕಳಕಳಿಯಿಂದ ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ಈ ನನ್ನ ಭಾಷಣವನ್ನು ಮುಗಿಸುತ್ತೇನೆ.

5-00 P. M.

† ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಪ್ರವಾಹ ಪರಿಹಾರದ ಕೆಲಸಗಳಿಗೋಸ್ಕರ ಈ ಅಸೆಂಬ್ಲಿಯನ್ನು ಅಡ್ಜರ್ನ್ ಮಾಡಿಸಿ ನಮ್ಮ ಮಂತ್ರಿಗಳು ಮತ್ತು ನಾಯಕರುಗಳು ಪ್ರವಾಹ ಬಂದಿದ್ದ ಕಡೆಗಳಿಗೆ ಹೋಗಿ ನೋಡಿಕೊಂಡು ಬರಲು 10-12 ದಿನಗಳಷ್ಟು ಬಿಡುವು ಮಾಡಿಕೊಂಡು ಈಗ ವಾಪಸು ಬಂದಿರುವ ಈ ಅಮಲಿನಲ್ಲಿ ಈ ಬಿಲ್ಲನ್ನು ಇಂದು ಇಲ್ಲಿ ಮಂಡಿಸಿದ್ದಾರೆ. ಈ ಅಮಲಿನಲ್ಲಿಯೇ ಅವರಿರುವುದರಿಂದ ಅವರಿಗೆ ಇನ್ನೂ ಅಮಲೇ ಇಳಿದಿಲ್ಲ. ಅಂತಹುದರಲ್ಲಿ ಈ ಬಿಲ್ಲಿನ ಮೇಲೆ ಮಾತನಾಡಲು ಇದಕ್ಕೆ ಮೂರು ದಿನಗಳಷ್ಟು ಕಾಲಾವಕಾಶವನ್ನು ಕೊಟ್ಟಿದ್ದಾರೆ. ಈಗಾಗಲೇ ನಮ್ಮ ಮಾನ್ಯ ಮಿತ್ರರುಗಳು ಈ ಕಾಯಿದೆಯಲ್ಲಿರತಕ್ಕ ಲೋಪದೋಷಗಳೇನು ಎನ್ನುವುದನ್ನು ವಿಷದವಾಗಿ ಮತ್ತು ಬಹಳ ಚೆನ್ನಾಗಿ ಹೇಳಿ ನಮ್ಮ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರಿಗೂ ತಿಳಿಯುವಂತೆ ಹೇಳಿ ಅದರ ಅಮಲನ್ನೂ ಬಿಡಿಸಿದ್ದಾರೆ. ಇದಕ್ಕೆ ಅನೇಕ ಕಥೆಗಳಿವೆ. ಆದರೆ ಅವರು ಈ ಬಿಲ್ಲನ್ನು ತಂದು ಇಲ್ಲಿ ವಿವರಿಸುವಾಗ ಯಾವ ಒಂದು ಉದಾಹರಣೆಯನ್ನಾದರೂ ಸಮಂಜಸವಾಗಿ ಕೊಟ್ಟಿಲ್ಲ. ನಮ್ಮ ದೇಶದ ಜನರ ನೈತಿಕ ಮಟ್ಟ ಹೆಚ್ಚಿ ಆರ್ಥಿಕ ಮಟ್ಟ ಹೆಚ್ಚಿದೆ ಎಂದು ಹೇಳಿದರು. ಅವರು ಯಾವ ರೀತಿಯಲ್ಲಿ ಹೆಚ್ಚಾಗಿದೆ ಎನ್ನುವುದನ್ನು ತೋರಿಸುವಂತಹ ಅವರ ಅನುಭವದಿಂದ ಬಂದಿರುವ ಕಾರಣಗಳಾಗಲೀ ಯಾವುದೂ ಇಲ್ಲ. ಆದರೆ ನಮ್ಮ ಮಾನ್ಯಮಂತ್ರಿಗಳು ಈ ಅಸೆಂಬ್ಲಿಯಲ್ಲಿ ಬಂದು ಪಾನನಿರೋಧ ಯಶಸ್ವಿಯಾಗಿದೆ ಎಂದು ಉತ್ತರ ಹೇಳುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಈಚೆಗೆ ನಮ್ಮ ಮಂತ್ರಿ

(ಶ್ರೀ ಕೆ. ಪಿ. ರೇವಣ ಸಿದ್ದಪ್ಪ)

ಗಳಾದ ಶ್ರೀಮಾನ್ ಚನ್ನಬಸಪ್ಪನವರು ಮಡಕೇರಿ ಮತ್ತು ಇನ್ನಿತರ ಕಡೆಗೆ ಹೋಗಿದ್ದಾಗ ಮಡಕೆ, ಕುಡಿಕೆಗಳನ್ನು ಹಿಡಿದುಕೊಂಡು ಜನ ಕೂತಿರುವುದು ಮತ್ತು ಅಲ್ಲಿ ಮಾರಮ್ಮನ ಗುಡಿಗೆ ಮೆರವಣಿಗೆ ಹೋಗುವಂತೆ ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳೂ ನಿಂತಿರುವಂತೆ ಫೋಟೋಗಳು ಪೇಪರಿನಲ್ಲಿ ಬಂದಿರುವುದನ್ನು ನೋಡಿದೆವು. ಈ ಫೋಟೋಗಳನ್ನು ನೋಡಿದ ಅನೇಕ ಜನರು ಶೀಶೆಗಳು, ಕುಡಕೆ ಮಡಕೆಗಳನ್ನು ಖಾಲಿಯಾಗಿಟ್ಟು ಪೋಲೀಸಿನವರೇ ಕುಡಿದು ಬಿಟ್ಟು ಮಿಕ್ಕದ್ದು ಹೀಗಿಟ್ಟಿದ್ದಾರೇನೋ ಎಂದು ಹೇಳುತ್ತಿದ್ದರು. ಹೀಗೆ ಅತಿರೇಕವಾಗಿ ಯಾವುದನ್ನು ಮಾಡಬಾರದು. ಕೆಲವು ಜನ ಹುಡುಗರು ನಮ್ಮೂರಿನಲ್ಲಿ ಶ್ರೀಮಾನ್ ಚನ್ನಬಸಪ್ಪನವರ ಫೋಟೋವನ್ನು ನೋಡಿ ಕುಡಿಯುವವರೊಂದಿಗೆ ಹೋಗಿ ಕುಡಿಯುತ್ತಾರೇನೋ ಎಂದು ಅರ್ಥ ಮಾಡಿಕೊಂಡರು. ಆಗ ನಾವು ಅವರಿಗೆ ಆ ರೀತಿ ಅರ್ಥಮಾಡಬಾರದು ಎಂದು ನಾವು ಹೇಳಿ ಇದು ಕಳ್ಳಭಟ್ಟಿಯನ್ನು ಹಿಡಿದಿರುವುದು ಎಂದು ಹೇಳಲಾಯಿತು. ಯಾವಾಗಲೂ ನಾವು ನಮ್ಮ ಗೌರವವನ್ನುಳಿಸಿಕೊಂಡು ನಮ್ಮ ಕೆಲಸಗಳನ್ನು ಮಾಡಿಕೊಂಡರೇ ನಮಗೂ ಗೌರವವಿರುತ್ತದೆ ಎಂದು ನಾನು ಭಾವಿಸುತ್ತೇನೆ. ಕಳ್ಳ ಭಟ್ಟಿಯನ್ನು ಯಾರು ತಯಾರು ಮಾಡುತ್ತಾರೆ ಎನ್ನುವುದನ್ನು ಹುಡುಕಿ ಅವರ ಮೇಲೆ ಎರಡು ಮೂರು ಕೇಸುಗಳನ್ನು ಹಾಕಿಪ್ಪೇವೆಂದು ಹೇಳಬಹುದು ಕಳ್ಳ ಭಟ್ಟಿ ಮಾಡುವವರನ್ನು ಹುಡುಕಬೇಕು ಎಂದು ಹೋದಾಗ ಅಲ್ಲಿ ಒಂದು ಕಡೆಗೆ ಎರಡು ಶೀಶೆಗಳನ್ನಿಟ್ಟು ಅದರ ಮೇಲೆ ಎರಡು ಖದ್ದರು ಟೋಪಿಗಳನ್ನು ಹಾಕಿದ್ದರು ಹೀಗೆ ಮುಚ್ಚಿಟ್ಟಿದ್ದೀರಿ ಎಂದು ಆ ಜನರನ್ನು ಕೇಳಿದಾಗ ಅವರು ಈ ರೀತಿ ಟೋಪಿ ಹಾಕಿರುವವರ ಆಶ್ರಯದಲ್ಲಿಯೇ ಈ ಕಳ್ಳ ಭಟ್ಟಿಯನ್ನು ತಯಾರುಮಾಡುತ್ತಿದ್ದೇವೆ ಮತ್ತು ಇವರ ಆಶ್ರಯದಲ್ಲಿರಲು ಅವರ ಪಕ್ಷದ ಸದಸ್ಯರಾಗಲು ನಾಲ್ಕಾಣೆಯ ಸದಸ್ಯರ ಟಿಕೆಟ್ಟಿನ ಪುಸ್ತಕಗಳನ್ನು ಉಪಯೋಗಿಸಿಕೊಂಡು ಈ ಪಾರ್ಟಿಯ ಸದಸ್ಯರಾಗಿದ್ದಾರೆ. ಇದಕ್ಕೆ ಸಬ್‌ಇನ್ಸ್‌ಪೆಕ್ಟರರೂ ಸಹಾಯವೂ ಇದೆ. ಇವರ ಪಕ್ಷಕ್ಕೆ ಸಿಕ್ರಿಯಾ ಸದಸ್ಯರು ಯಾರು ಎಂದರೆ ಮೊದಲು ಕಂಟ್ರಾಕ್ಟರುಗಳು, ಹೀಗೆ ಆಗಿರುವ ಸದಸ್ಯರುಗಳೊಡನೆ ಕಾಂಗ್ರೆಸಿನ ನ್ಯಾಷನಲ್ ಫ್ಲಾಗ್‌ನ್ನು ಹಾಕಿಸಿಕೊಂಡು ಫೋಟೋ ಹಾಕಿಸಿಕೊಂಡು ಪ್ರಚಾರಮಾಡುತ್ತಿರುತ್ತಾರೆ. ಈಗಂತೂ ಬಸ್ಸಿನಲ್ಲಿ ಹೋಗಿ ಟಿಕೆಟ್ಟನ್ನು ಕೇಳುವಾಗ ಅನೇಕ ಜನ ಯಾವ ಪಕ್ಷಕ್ಕೆ ಸೇರಿದ ಟಿಕೆಟ್ಟು ಬೇಕು ಎಂದು ಕೇಳುತ್ತಾರೆ. ಯಾರೋ ಒಬ್ಬ ಆಫೀಸರು ಇದ್ದರು, ಅವರು ಸ್ವಲ್ಪ ಕಿವಿಡಾಗಿದ್ದವರು, ಅವರು ಜಬರ್ದಸ್ತಿನಿಂದ ತಮ್ಮ ಕೆಳಗಿನ ಅಧಿಕಾರಿಯನ್ನು ಚೆನ್ನಾಗಿ ಮಾಮೂಲುಗಳನ್ನು ತಗೆದುಕೊಂಡು ಕೆಲಸ ಮಾಡುತ್ತಿದ್ದೀರಾ ಎಂದು ಕೇಳಿದುದಕ್ಕೆ ಬಹಳ ಚೆನ್ನಾಗಿ ಮಾಡುತ್ತೇವೆಂದು ಹೇಳಿದಂತೆ, ಈ ಪಾನ ನಿರೋಧದ ಕಾಯಿದೆಯನ್ನು ಇಲ್ಲಿ ತರುತ್ತಿದ್ದಾರೆ. ಇಂತಹ ಕಾಯಿದೆಗಳನ್ನು ತರುವಾಗ ಏನಾಗುತ್ತದೆ ಎನ್ನುವುದನ್ನು ತಿಳಿಯದೆ ಇನ್ನು ನಾಲ್ಕಾರು ತಿಂಗಳಲ್ಲಿ ರಿಟೈರು ಆಗುತ್ತಿರುವ ಮಂತ್ರಿಗಳು ಈ ಕಾಯಿದೆ ತರುತ್ತಿದ್ದಾರೆ. ಈ ಕಾಯಿದೆಯಲ್ಲಿರುವಂತೆ ಕುಡಿಯುವವರು ಐದು ರೂಪಾಯಿಗಳಷ್ಟು ಫೈನ್ ಎಂದಿದ್ದರೆ ಹೇಗೋ ಕೊಟ್ಟುಬಿಡುತ್ತಿದ್ದರು. ಆದರೆ ಈ ಕಾಯಿದೆಯೊಳಗೆ ಈಗಿರುವಂತೆ ಇದ್ದರೆ, ಎರಡು ಮೂರು ಸಾವಿರ ರೂಪಾಯಿಗಳಷ್ಟು ಫೀಸನ್ನು ಕೊಟ್ಟು ಒಳ್ಳೆ ಲಾಯರುಗಳನ್ನಿಟ್ಟು ವಕಾಲತ್ತು ಕೊಡಲನುಕೂಲವಾಗುವಂತೆ ಈ ರಿಟೈರಿಂಗ್ ಮಿನಿಸ್ಟರುಗಳಿಗೆ ವಕಾಲತ್ತು ಕೊಡಿಸಿದರೆ ಅನುಕೂಲವಾಗುತ್ತದೆ ಮತ್ತು ಇದರಿಂದ ಅವರ ಆರ್ಥಿಕ ಮುಗ್ಗಟ್ಟನ್ನು ಸುಧಾರಿಸಿ ಕೊಳ್ಳಬಹುದು ಎಂದು ಹೇಳುತ್ತಾರೆ.

ಸಾಮಾನ್ಯವಾಗಿ ಜನಗಳನ್ನು ವಿದ್ಯಾವಂತರನ್ನಾಗಿ ಮಾಡುವುದು ಮತ್ತು ಬುದ್ಧಿವಂತರನ್ನಾಗಿ ಮಾಡುವುದು ಸರ್ಕಾರದ ಕರ್ತವ್ಯಗಳಲ್ಲಿ ಒಂದಾಗಿದೆ. ಕುಡಿಯುವುದರಿಂದ ಬಹಳ ಹಾನಿಯಾಗುತ್ತದೆ. ಅದು ಕೆಟ್ಟದ್ದು ಎಂದು ಜನಗಳಿಗೆ ತಿಳುವಳಿಕೆ ಹೇಳಬೇಕು. ಯಾವ ದೇಶದಲ್ಲಿ ಕಾನೂನುಗಳನ್ನು ಎಷ್ಟು ಹೆಚ್ಚಾಗಿ ಮಾಡುತ್ತಾರೋ ಅಂತಹ ದೇಶದಲ್ಲಿ ಲಂಚಗೂಳಿತನ

ಹೆಚ್ಚಾಗುತ್ತದೆ ಎನ್ನುವುದು ಸ್ವಾಭಾವಿಕವಾದುದು. ಇದರಿಂದ ಅಪರಾಧಿಗಳು ಜಾಸ್ತಿಯಾಗುತ್ತಾರೆ; ಲಂಚಗಳನ್ನು ಜನಗಳು ಅಧಿಕಾರಿಗಳಿಗೆ ಕೊಡುವುದು ಜಾಸ್ತಿಯಾಗುತ್ತದೆ. ಆದ್ದರಿಂದ ಜನಗಳನ್ನು ಒಳ್ಳೆಯವರನ್ನಾಗಿ ಮಾಡುವುದಕ್ಕೆ ಬದಲು ಅವರ ಮೋಸದ ಕೃತ್ಯಗಳನ್ನು ಮಾಡುವುದಕ್ಕೆ ಎಷ್ಟುಬೇಕೋ ಅಷ್ಟನ್ನು ಮಾಡುವುದಕ್ಕೆ ನೀವೇ ಅವಕಾಶ ಮಾಡಿ ಕೊಡುತ್ತಿದ್ದೀರಿ.

ಇನ್ನು ಲೈಸೆನ್ಸ್ ಕೊಡುವ ವಿಚಾರದಲ್ಲಿ ಸರ್ಕಾರದವರು ಒಂದು ಕಾನೂನನ್ನು ಇಟ್ಟು ಕೊಂಡಿದ್ದಾರೆ. ಇವರು ಬೆಂಗಳೂರು ಮತ್ತು ಮೈಸೂರಿನಲ್ಲಿ ಯಾವರೀತಿ ಲೈಸೆನ್ಸ್ ಕೊಟ್ಟಿದ್ದಾರೆಂದರೆ ಒಬ್ಬೊಬ್ಬರು ಈ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಯಾವುದೋ ಒಂದು ದೊಡ್ಡ ಕಂಪೆನಿ ಎಂದು ಹೆಸರನ್ನಿಟ್ಟು ಬೇಕಾದಷ್ಟು ಮೆಡಿಸನ್ಸ್ ಜೊತೆಗೆ ಕಮಲಾ ಟಾನಿಕ್ ನೆಹರೂ ಟಾನಿಕ್ ಇತ್ಯಾದಿ ಹೆಸರುಗಳನ್ನುಳ್ಳ ಪಾನೀಯದ ಶೀಷಾಯಿಗಳನ್ನು ಮಾರುವುದಕ್ಕೆ ಷುರು ಹಚ್ಚಿದ್ದಾರೆ. ಸುಮಾರು 10-12 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಈ ಮಂತ್ರಿಗಳಿಂದ opening ceremony ಕೂಡ ಮಾಡಿದ್ದಾರೆ. ಹೀಗೆ ಏನೇನೋ ದೊಡ್ಡದೊಡ್ಡ ಹೆಸರುಗಳನ್ನಿಟ್ಟುಬಿಟ್ಟು ಈ ಮಧ್ಯ ಪಾನೀಯಗಳನ್ನು ಬಾಟಲುಗಳಲ್ಲಿ ತುಂಬಿ ಕಳುಹಿಸುವುದು ಈಚೀಚೆಗೆ ಬಹಳ ಜಾಸ್ತಿಯಾಗುತ್ತಿದೆ. ಅದರಲ್ಲಿ ಪರ್ಸೆಂಟೇಜ್ ಆಫ್ ಆಲ್ಕೋಹಾಲ್ ಸುಮಾರು ಶೇ. 90 ಭಾಗ ಇರುತ್ತದೆ. ಇದನ್ನು ದೇಶದಲ್ಲಿ ಎಲ್ಲಿಬೇಕಾದರೂ ಮಾರಬಹುದು. ಕೊನೆಗೆ ಮಂತ್ರಿಗಳ ಮನೆಬಾಗಿಲಿಗೆ ಬಂದೂ ಇವು ಸೇರುತ್ತವೆ ಎನ್ನುವುದರಲ್ಲಿ ಯಾವ ಸಂದೇಹವೇ ಇಲ್ಲವೆಂದು ಹೇಳ ಬಹುದು. ಇದರಲ್ಲಿ ಏನೂ ಎಗ್ಸಾಜಿರೇಷನ್ ಇಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಎಷ್ಟು ಔಷಧದ ಅಂಗಡಿಗಳಿವೆ ಎಂಬುದನ್ನು ಲೆಕ್ಕ ಮಾಡಿ ಪರೀಕ್ಷೆ ಮಾಡಿನೋಡಿ. ಇಂತಹ ನಿದರ್ಶನಗಳು ಎಷ್ಟುಬೇಕಾದರೂ ಸಿಕ್ಕುತ್ತವೆ. ಯಾವ್ಯಾವ ಮಂಡಲಿ ಕಾಂಗ್ರೆಸ್ ಸಮಿತಿ ಸದಸ್ಯರು ಇದರಲ್ಲಿ ಸೇರಿಕೊಂಡಿದ್ದಾರೆಂಬುದು ಆಗ ಗೊತ್ತಾಗುತ್ತದೆ. ಅಪ್ಪ, ತಾತನ ಕಾಲದಿಂದಲೂ ತಯಾರು ಮಾಡುತ್ತಿದ್ದರೋ ಇಲ್ಲವೋ, ಈಗ ಹೊಸದಾಗಿ ಕೆಲವರು ಅಂಗಡಿಗಳನ್ನು ಇಟ್ಟು ಬಿಟ್ಟಿದ್ದಾರೆ; ದೊಡ್ಡದೊಡ್ಡ ಎಕ್ಸೈಜು ಕಂಟ್ರಾಕ್ಟರ್ಸ್ ಸಹ ಆಗಿಬಿಟ್ಟಿದ್ದಾರೆ. ಈ ಕಂಟ್ರಾಕ್ಟರ್ಸ್ ಸಮಯ ಬಂದರೆ ಕ್ಯಾಬಿನೆಟ್ಟನ್ನು ಇಳಿಸಬಲ್ಲರು ಮತ್ತು ಏರಿಸಬಲ್ಲರು. ಏನುಬೇಕಾದರೂ ಸರ್ಕಾರದಿಂದ ಮಾಡಿಸಬಲ್ಲರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಜ. ಇನ್ನೊಂದು ಸಾರಿ ಹೇಳಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೆಲವು ಕಂಟ್ರಾಕ್ಟರ್ಸ್ ಬೆಂಗಳೂರಿನಲ್ಲಿ ವಿಶೇಷವಾಗಿ ಈ ರೀತಿ ಮಾರಾಟ ಮಾಡುತ್ತಿದ್ದಾರೆ. ಬೇಕಾದಷ್ಟು ಉತ್ಪನ್ನವನ್ನೂ ಸಹ ಮಾಡುತ್ತಿದ್ದಾರೆ. ಮಂತ್ರಿಮಂಡಲಕ್ಕೆ ನೀವು ಬರುವಹಾಗೆಯೂ ಮಾಡುತ್ತಾರೆ. ನಿಮ್ಮನ್ನು ಚುನಾವಣೆಗೂ ಅವರೇ ನಿಲ್ಲಿಸುತ್ತಾರೆ. ನೀವು ಚುನಾವಣೆಯಲ್ಲಿ ಜಯಶೀಲರಾಗುವುದಕ್ಕೆ ಬೇಕಾದಷ್ಟು ಸಹಾಯಗಳನ್ನು ಮಾಡುತ್ತಾರೆ. ಕುಡಿಯತಕ್ಕವರಿಗೆ ಷರಾಬು, ಹೆಂಡ, ನಿಷಿದ್ಧವಾದಾಗ ಕೊಡುತ್ತಾರೆ. ಕುಡಿಯುವವರನ್ನು ನಿಮ್ಮ ಪಕ್ಷದಕಡೆಗೇ ಓಟು ಹಾಕುವಂತೆ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಸೌಕರ್ಯಕ್ಕಾಗಿ ನೀರಾ ಅಂಗಡಿಗಳನ್ನೂ ಸಹ ಇವರು ತೆಗೆಯುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಖಾದಿ ಮತ್ತು ಗ್ರಾಮದ್ಯೋಗ ಮಂಡಲಿಯವರು ಸುಮಾರು 4-5-6 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬ್ರದರ್ನ್ ಸೊಸೈಟಿ, ಸಿಸ್ಟರ್ ಸೊಸೈಟಿ ಆಮೇಲೆ ಫಾದರ್ ಸೊಸೈಟಿ, ಮದರ್ ಸೊಸೈಟಿ--ಹೀಗೆ ಅವಕ್ಕೆಲ್ಲಾ ಒಂದೊಂದಾಗಿ ಲೈಸೆನ್ಸ್ ಕೊಡುವುದು ಈಗ ಹೆಚ್ಚಾಗುತ್ತದೆ. ಬೆಳಗ್ಗೆ ನೀರಾ, ಮಧ್ಯಾಹ್ನ ಶೇಂದಿ, ಸಾಯಂಕಾಲ ಷರಾಬು ಅಥವಾ ಹೆಂಡ–ಈ ರೀತಿಯಲ್ಲಿ ದುರ್ವ್ಯಾಪಾರ ಈಗ ನಡೆಯುತ್ತಿದೆ.

(ಶ್ರೀ ಕೆ. ವಿ. ರೇವಣ ಸಿದ್ದಪ್ಪ)

ಅನೇಕ ಜನ ರಿಲೀಫ್ ಫಂಡಿಗೆ ಈಗ ಎಷ್ಟೋ ಹಣವನ್ನು ಕೊಡುತ್ತಿದ್ದಾರೆ. ಅದರಲ್ಲಿ ಎಷ್ಟು ಹಣ ಎಲ್ಲೆಲ್ಲಿ ಹೋಗುತ್ತೋ ಗೊತ್ತಿಲ್ಲ ಏಕೆಂದರೆ ಎಲೆಕ್ಷನ್ ಫಂಡಿಗೆ ಈಗ 20 ಲಕ್ಷ ರೂಪಾಯಿಗಳನ್ನು ಕೊಡಿಸಬೇಕಾಗಿದೆ ಎಕ್ಸೈಜು ಕಂಟ್ರಾಕ್ಟರ್ಸ್ ನಿಮ್ಮ ಪಕ್ಷದಪರವಾಗಿ ಈಗಿನಿಂದಲೇ ಸಿನ್ಸಿಯರಾಗಿ ವರ್ಕ್ ಮಾಡುತ್ತಿದ್ದಾರೆ. ಆದ್ದರಿಂದ ಅಂತಹವರ ಮೇಲೆ ನೀವೇನೂ ಭೇದ ಭಾವನೆಯನ್ನು ಇಟ್ಟುಕೊಳ್ಳಬೇಡಿ. ಅದರಿಂದಾಗಿ ಬೆಳಿಗ್ಗೆಯಾದರೆ ನೀವು ಅಂತಹವರ ಪರವಾಗಿ ನಿಮ್ಮ ಮನೆಯ ಬಾಗಿಲಿಗೆ ಬರತಕ್ಕ ಜನಗಳಿಗೆ ನಿಮ್ಮ ಪರವಾಗಿ ಮುಂದೆ ಚುನಾವಣೆಯಲ್ಲಿ ಕೆಲಸ ಮಾಡುವುದಕ್ಕಾಗಿ ತಕ್ಕ ಉದ್ಯೋಗಗಳನ್ನು ಈಗಿನಿಂದಲೇ ಕಲ್ಪಿಸಿಕೊಡಬೇಕಾಗಿದೆ. ಅಂತಹವರನ್ನೆಲ್ಲಾ ಮುಂದೆ ಯಾವ್ಯಾವ ರೀತಿಯಲ್ಲಿಟ್ಟುಕೊಳ್ಳಬೇಕು ಎಂಬುದನ್ನು ಈಗಿನಿಂದಲೇ ಯೋಚನೆ ಮಾಡುತ್ತಿದ್ದೀರಲ್ಲವೆ! ಪಾನನಿರೋಧ ನಿಜವಾಗಿ ಎಲ್ಲೂ ಪೂರ್ತಿ ಜಾರಿಯಲಿಲ್ಲ. ಒಂದು ಊರಿನ ಜನರೂ ಸಹ ಕುಡಿಯುವುದನ್ನು ಬಿಟ್ಟಿಲ್ಲ. ಪ್ರತಿಯೊಂದು ಊರಿನಲ್ಲೂ ಕುಡಿತವಿದ್ದೇ ಇದೆ. ನೀರಾವನ್ನು ಈಗ ವಿಶೇಷವಾಗಿ ಕುಡಿಯುತ್ತಿದ್ದಾರೆ. ಕಳ್ಳಭಟ್ಟಿ ಸಾರಾಯಿ ಇಳಿಸುವುದು, ಪ್ರತಿಯೊಂದು ಕಡೆಯೂ ಅದರ ಸಾಗಾಣಿಕೆ ಹೆಚ್ಚಾಗುತ್ತಿದೆಯೇ ಹೊರ್ತು ಕಡಮೆಯಾಗಿಲ್ಲ. ನೀವು ಇನ್ನೂ ಅಮೇರಿಕಾ, ಇಂಗ್ಲೆಂಡ್ ಫ್ರಾನ್ಸ್ ಮುಂತಾದ ದೇಶಗಳಿಗೆ ಹೋಗಿಲ್ಲ. ಮುಂದೇನಾದರೂ ನೀವೇ ಚುನಾವಣೆಯಲ್ಲಿ ಜಯಶೀಲರಾದರೆ next time ಅಲ್ಲಿಗೆ ಕಳುಹಿಸುತ್ತೇವೆ. ಅಲ್ಲಿನ ಆರ್ಥಿಕ ಮುಗ್ಗಟ್ಟು ಹೇಗಿದೆ ಎಂಬುದನ್ನು ನೀವು ಆಗ ನೋಡಬಹುದು. ಅದಕ್ಕಾಗಿ ನೀವು ಇಲ್ಲಿ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದೀರಿ, ನೀವು ಅವರಿಗೇನು ಹಣ ಕಳುಹಿಸುತ್ತಿಲ್ಲ. ನೀವೇ ಅವರನ್ನು ಕೈಯೊಡ್ಡಿ ಹಣಕ್ಕಾಗಿ ಭಿಕ್ಷೆ ಬೇಡುತ್ತಿದ್ದೀರಿ. ಆದ್ದರಿಂದ ಕುಡಿತ ಅವನವನ ಯೋಗ್ಯತೆ ಮೇಲೆ ಹೋಗುತ್ತದೆ ಎಂಬುದನ್ನು ಸರ್ಕಾರ ಮನಗಾಣಬೇಕು. ಅವನು ತನ್ನಷ್ಟಕೆತಾನೇ ಬುದ್ಧಿವಂತನಾಗಿ ಯೋಗ್ಯನಾಗಿ ಈ ಪದ್ಧತಿ ಕೆಟ್ಟದ್ದು; ಇದರಿಂದ ನನ್ನ ಶರೀರಕ್ಕೆ ಹಾನಿ ಎಂಬುದನ್ನು ತಿಳಿದುಕೊಳ್ಳಬೇಕು. ಅದಕ್ಕೆ ತಕ್ಕಹಾಗೆ ಕಾನೂನುಗಳನ್ನು ಸರ್ಕಾರ ಮಾಡಬೇಕು. ಆ ರೀತಿ ಮಾಡದೆ ಸುಮ್ಮನೆ ಎಲ್ಲಾ ಕಾನೂನಿನಿಂದಲೇ ಸರಿಮಾಡುತ್ತೇವೆಂದು ಮಂತ್ರಿಗಳು ಈ ಬಿಲ್ಲನ್ನು ತಂದಿರುವುದು ಖಂಡಿತವಾಗಿ ಯಶಸ್ವಿಯಾಗುವುದಿಲ್ಲ. ಖಂಡಿತವಾಗಿ ಈ ರೀತಿಯಿಂದ ಪಾನನಿರೋಧ ಶಾಸನದ ಕಾಯಿದೆಗಳನ್ನು ಜನ ಒಪ್ಪುವುದಿಲ್ಲ. ಇದು ಇನ್ನೊಬ್ಬರಿಕ್ಕಾಗಿ ನೀವೇ ಜನಗಳಿಗೆ ನೋವು ಕೊಟ್ಟಹಾಗಾಗುತ್ತದೆ. ಆದ್ದರಿಂದ ಇಂತಹ ಕಾನೂನುಗಳನ್ನು ಮಾಡುವಾಗ ಅವು ಜನರಿಗೆ ಮರ್ಯಾದೆ ಬರತಕ್ಕ ರೀತಿಯಲ್ಲಿರಬೇಕೆಂಬುದನ್ನು ಸರ್ಕಾರ ಯೋಚಿಸಬೇಕು. ಪೋಲೀಸ್ ಅಧಿಕಾರಿಗಳೇನೋ ಕೆಲವುಕಡೆ ಮಂತ್ರಿಗಳಿಂದ ಪ್ರಶಸ್ತ್ಯವನ್ನು ಪಡೆಯೋಣವೆಂಬ ಉದ್ದೇಶದಿಂದ ಬಹಳ ಕಠಿಣತರವಾಗಿ ಜನಗಳಿಗೆ ಹಿಂಸೆ ಕೊಡುವುದು ಸರಿಯಾದ ಮಾರ್ಗವಲ್ಲ. ಕುಡಿಯದೇ ಇರುವವರನ್ನು ಸುಮ್ಮಸುಮ್ಮನೆ ಹಿಡಿಯುವುದು ನಿಜವಾಗಿ ಕುಡಿಯುವವರನ್ನು ಅವರು ಒಂದುವೇಳೆ ಅವನಿಗೆ 10-20 ರೂಪಾಯಿಗಳ ಲಂಚ ಕೊಟ್ಟರೆ ಬಿಟ್ಟುಬಿಡುವುದು. ಹೀಗೆ ಮಾಡುತ್ತಿದ್ದಾರೆ. ಯಾವನೋ ಒಬ್ಬ ಅನಾಮಧೇಯ ಫ್ರೆಂಚ್‌ಪಾಲಿಷ್ ಮಾಡಿಕೊಂಡು ಅದರಲ್ಲೂ ಬಡವ ಮಡಿಕೆ, ಕುಡಿಕೆ ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ ಅಂತಹವನ ಮೇಲೆ ಅವನು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಿದ್ದಾನೆಂದು ಇಲ್ಲದ ಸಲ್ಲದ ದೋಷಾರೋಪಣೆಯನ್ನು ಅವನ ಮೇಲೆ ಹೊರಿಸಿ ಪೋಲೀಸಿನವರಿಗೆ 10-20 ರೂಪಾಯಿಗಳ ಲಂಚ ಕೊಟ್ಟು ಕಳುಹಿಸಿಬಿಟ್ಟು ಪುನಃ ಆ ಬಡವನು ತಯಾರುಮಾಡುತ್ತಿದ್ದ ಸಾರಾಯಿಯನ್ನೇ ತಾನೂ ಉಪಯೋಗಿಸುವುದು—ಈರೀತಿ ವಿಶೇಷವಾಗಿ ನಡೆಯುತ್ತಿವೆ. ಆ ಪೋಲೀಸಿನವರಿಗೆ ಮನೆಯ ದಿನದ ಖರ್ಚಿಗೆ ದುಡ್ಡು ಕೊಟ್ಟರೆ ಸಾಕು. ಅಂತಹವರನ್ನು ಬಿಟ್ಟುಬಿಡುತ್ತಾರೆ. ಯಾವಾಗ ಅಧಿಕಾರಿಗಳಾಗಲಿ, ಅಥವಾ ಮಂತ್ರಿಗಳೇ ಆಗಲೀ ಅಂತಹ ಕಡೆಗಳಿಗೆ ಹೋಗಿ ಕಳ್ಳಭಟ್ಟಿ ಸಾರಾಯಿ ತಯಾರು ಮಾಡು

ತ್ತಿದ್ದಂತಹವನ ಮಡಿಕೆ, ಕುಡಿಕೆಗಳನ್ನು ತೆಗೆದು ಬಿಸಾಡಿದ್ದಾರೆ? ಅದು ಅವರ ಕೈಯಲಿ ಆಗದಿರುವ ಮಾತು. ಹಿಂದೆ ಗಂಧದಮರ, ತೇಗದ ಮರಕ್ಕೆ ಬಹಳ ಬೆಲೆ ಇತ್ತು. ಹೆಚ್ಚು ಬೆಲೆಯನ್ನು ಕೊಟ್ಟು ತೆಗೆದುಕೊಂಡು ಹೋಗುತ್ತಿದ್ದರು. ಅಂತಹ ಸಂದರ್ಭದಲ್ಲಿಯೂ ಕಳ್ಳತನದಿಂದ ಈ ಮರಗಳು ಸಾಗಾಣಿಕೆಯಾಗುತ್ತಿತ್ತು. ಆಗಲೂ ಬಡವರಿಗೆ ಬಹಳ ತೊಂದರೆಯಾಗುತ್ತಿತ್ತು. ಅದೇರೀತಿಯೇ ಈಗ ಕಳ್ಳಭಟ್ಟಿ ಸಾರಾಯಿ ತಯಾರುಮಾಡುವುದೂ ಆಗಿದೆ. ನಿಜವಾಗಿ ಯಾರು ಈ ಕಳ್ಳಭಟ್ಟಿ ಸಾರಾಯಿಯನ್ನು ತಯಾರುಮಾಡುತ್ತಾರೋ ಮತ್ತು ಯಾರು ಇದಕ್ಕೆ ಬೆಂಬಲ ಕೊಡುತ್ತಾರೋ ಅಂತಹವರನ್ನು ನೀವು ಹಿಡಿಯುಲಲ್ಲ. ಅಂತಹ ಕೇಸುಗಳನ್ನೂ ನೀವು ಹಿಡಿಯಲಿಲ್ಲ. ಮಂತ್ರಿಗಳು ಬಂದರು ಅಂದರೆ ಎಷ್ಟೋ ಕೇಸುಗಳನ್ನು ಪೋಲೀಸಿನವರು ಹಿಡಿದಿದ್ದಾರೆ ಎಂದು ಆಗ ಹೇಳುತ್ತಾರೆ. ಅದು ಹೇಗೆ? ಮಂತ್ರಿಗಳೇನಾದರೂ ಮೀಸೆಗೀಸೆ ಬಿಟ್ಟುಕೊಂಡು ಹೋಗಿ ಕುಡಿಕೆ ಮಡಿಕೆಗಳನ್ನು ಪರೀಕ್ಷೆ ಮಾಡಿದ್ದಾರೆಯೇ ಅಥವಾ ಇವರು ಗಡ್ಡಗಿಡ್ಡ ಏನಾದರೂ ಬಿಟ್ಟಿದ್ದರೇ ಅಥವಾ ಸೀರೆ ಉಟ್ಟುಕೊಂಡು ಹೋಗಿ ಅದನ್ನೆಲ್ಲಾ ನೋಡಿದ್ದರೇ! ಅಥವಾ ಪೋಲೀಸಪರು ಇಂತಿಂಥವರು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಿದ್ದಾರೆಂದು ಅವರನ್ನೆಲ್ಲಾ ಕರೆದುಕೊಂಡು ಬಂದು ಇವರಮುಂದೆ ನಿಲ್ಲಿಸಿದ್ದರೇ ಅಥವಾ ಕಳ್ಳಭಟ್ಟಿ ಸಾರಾಯಿ ತಯಾರು ಮಾಡತ್ತಿದ್ದಂಥ ಮಡಿಕೆ ಕುಡಿಕೆಗಳನ್ನು ತಂದು ಇವರಮುಂದೆ ಇಟ್ಟಿದ್ದರೇ! ಇವೆಲ್ಲಾ ಸುಳ್ಳು. ಬರೀ ನಾಟಕ ಮಾಡಿಕೊಂಡು ಇಷ್ಟು ದಿವಸ ಕಳೆದಿದ್ದೀರಿ ನಿಮಗೇನಾದರೂ ವಿವೇಚನೆ ಇದೆಯೇ, ಇಂಥಾದ್ದನ್ನೆಲ್ಲಾ ಗುಪ್ತ ದಳಗಳನ್ನು ಇಟ್ಟುಕೊಂಡು ಮಾಡಬೇಕು. ನಿಮ್ಮ ಕಾಲದಲ್ಲಿ ಪೂರ್ತಿ ಪಾನನಿರೋಧವನ್ನು ಜಾರಿಗೆ ತಂದಿದ್ದೇವೆ ಎನ್ನುವ ಬಾಬು ಒಂದೂ ಇಲ್ಲ. ಪಾನನಿರೋಧ ಜಾರಿಗೆ ತಂದಿದ್ದೇವೆಂದು ಕೆಲವು ಪ್ರದೇಶಗಳಲ್ಲಿ ಇವರು ಸಾರಿದ್ದರೂ ಅಲ್ಲಿ ಯಾವರೀತಿಯಾದರೂ ಮಧ್ಯ ಪಾನೀಯವನ್ನು ಮಾಡುತ್ತಲೇ ಇದ್ದಾರೆ. ಈರೀತಿ ಮಾಡಿದರೆ ಪಾನನಿರೋಧ ಶಾಸನವನ್ನು ಜಾರಿಗೆ ಕೊಟ್ಟಹಾಗೆ ಆಗುತ್ತದೆಯೇ? ಖಂಡಿತವಾಗಿ ಇಲ್ಲ. ಇವತ್ತು ಟಿ.ಬಿ. ಆಸ್ಪತ್ರೆಗೆ ಹೋಗಿ ನೋಡಿದರೆ ಕುಡಿತದಿಂದ ನರಳುತ್ತಿರುವವರು ಎಷ್ಟೋ ಜನರಿದ್ದಾರೆ. ಅದರಿಂದುಂಟಾಗಿರತಕ್ಕ ರೋಗರುಜಿನಗಳೇ ಹೆಚ್ಚಾಗಿವೆ. ಅಂದಮೇಲೆ ಪಾನನಿರೋಧವನ್ನು ಈಚೆಗೆ ಜಾರಿಗೆ ತಂದಿರುವುದು ಸಕ್ಸೆಸ್ ಆಗಿದೆಯೆಂದು ಹೇಗೆ ಹೇಳುತ್ತಾರೋ ಗೊತ್ತಿಲ್ಲ. ಹಾಗಿದ್ದರೆ ಮೈಸೂರಿನಲ್ಲಿ ಇವತ್ತೂ ಎಷ್ಟು ಪೌಂಡು ಮೊಲೆ ನವಾಸಾಗರ, ಅಮೋನಿಯಂ ಸಲ್ಫೇಟ್ ಉಪಯೋಗವಾಗುತ್ತಿದೆ, ಯಾವಯಾವ ರೀತಿಯ ನಮೂನೆಗಳ ಬಾಟಲ್‌ಗಳಲ್ಲಿ ಈ ಪಾನೀಯಗಳನ್ನು ತುಂಬಿ ಮನೆಮನೆಗೆ ಹಂಚುತ್ತಾರೆಂಬುವನ್ನು ಸರ್ಕಾರ ಪರೀಕ್ಷೆ ಮಾಡಿ ನೋಡಬೇಕು. ಆಗ ಎಷ್ಟರಮಟ್ಟಿಗೆ ಪಾನನಿರೋಧ ಶಾಸನ ಯಶಸ್ವಿಯಾಗಿದೆ ಎಂಬುದು ಗೊತ್ತಾಗುತ್ತದೆ. ಶರಾವತಿ ಮತ್ತು ಲಕ್ಕವಳ್ಳಿ ಕಡೆ ಈ ಪಾನನಿರೋಧ ಶಾಸನವನ್ನು ಜಾರಿಗೆ ತರುವುದು ಬಹಳ ಕಷ್ಟವೆಂಬುದು ಉಪಾಧ್ಯಕ್ಷರಾದ ತಮಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಕುಡಿತದ ಹಾವಳಿ ಬಹು ಹೆಚ್ಚು. ಒಂದು ತಿಂಗಳಿಗೆ 25 ಸಾವಿರ ಬಾಟಲುಗಳನ್ನು ತಯಾರುಮಾಡಿ ಕಳುಹಿಸುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ಯಾವರೀತಿ ತಡೆಗಟ್ಟಬೇಕೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಕುಡಿಯದಂತಹ ಜನಗಳನ್ನು ಕುಡಿಸಿ ಅವರನ್ನು ನೀವೇ ಸಾಯಿಸುತ್ತಿದ್ದೀರಿ. ಇದೊಂದು ದೊಡ್ಡತನವೇ, ಇದೆಂಥಾ ದಡ್ಡತನ, ಇದೊಂದು ಹುಚ್ಚು ಬಿಡಬೇಕು. ಲಕ್ಕವಳ್ಳಿಯಲ್ಲಿ ಈ ದಿವಸ ಕಳ್ಳಭಟ್ಟಿ ಸಾರಾಯಿ ವ್ಯಾಪಾರ ವಿಪರೀತವಾಗಿದೆ. ಎಷ್ಟೋಜನ ಪೋಲೀಸರಿಗೆ ಶ್ರೀಮಂತರು ದುಡ್ಡು ಕೊಟ್ಟು ಕುಡಿದು ಹೊಗುತ್ತಿದ್ದಾರೆ. ಅಂತಹವರಮೇಲೆ ಪೋಲೀಸರ ಕೇಸು ಹಾಕುವುದೇ ಇಲ್ಲ. ಗಾಂಜಾ ಸೇದುವುದು, ಹೆಂಡ ಕುಡಿಯುವುದು, ಷರಾಬು ಅಥವಾ ಸಾರಾಯಿ ಕುಡಿಯುವುದು--ಇಂತಹ ಕೃತ್ಯಗಳನ್ನು ಮಾಡುವವರ ಹತ್ತಿರವೆಲ್ಲಾ ಕಾಸು ವಸೂಲುಮಾಡಿಕೊಂಡು ಪೋಲೀಸರು ಸುಖಜೀವನ ಮಾಡುತ್ತಿದ್ದಾರೆ. ಇಂಥಾದ್ದರಲ್ಲಿ ಪೋಲೀಸ್ ಅಧಿಕಾರಿಗಳು ಹೆಚ್ಚಿನ ಮಟ್ಟದಲ್ಲಿ ಇದನ್ನು ಸುಧಾರಿಸುತ್ತಿದ್ದಾರೆ. ಅವರಿಗೆ ಹೆಚ್ಚಿನ ಸಂಬಳ ಕೊಡಲಿಕ್ಕೆ ನಮ್ಮಲ್ಲಿ ಹಣವಿಲ್ಲವೆಂದು ನೀವು ಹೇಳುತ್ತೀರಿ. ಇವರಿಂದಲೇ ಈ ಶಾಸನ ಯಶಸ್ವಿಯಾಗಿ

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಸಾಧನೆಯಾಗಬೇಕೆಂದು ಹೇಳುತ್ತಿದ್ದೀರಿ. ಅಂದು ಒಂದು ಕನಸೇ ಹೊರತು ಬೇರೆ ಇಲ್ಲ. ಖಂಡಿತವಾಗಿ ಅವರಿಂದ ಈ ಕಾರ್ಯಸಾಧನೆ ಯಾಗಲಾರದು ಈ ವಿಧೇಯಕದಲ್ಲಿರುವ ಕಾನೂನುಗಳನ್ನು ಇಷ್ಟೊಂದು ಕಠಿಣವಾಗಿ ಉಪಯೋಗಿಸಲೂಬೇಡಿ. ಕ್ರಮೇಣ ಕ್ರಮೇಣ ಇದು ಒಂದು ಕೆಟ್ಟ ಪದ್ಧತಿ, ನಾವು ವಿದ್ಯಾವಂತರಾಗಬೇಕು, ಬುದ್ಧಿವಂತರಾಗಬೇಕು, ಯೋಗ್ಯರಾಗಬೇಕೆಂಬ ಮನೋಭಾವನೆ ಜನರಿಗೆ ಹುಟ್ಟುವುದಕ್ಕನುಗುಣವಾದ ಕಾನೂನುಗಳನ್ನು ಸರ್ಕಾರದವರು ರಚನೆ ಮಾಡಬೇಕು. ಒಟ್ಟಿನಲ್ಲಿ ಪಾನನಿರೋಧ ಶಾಸನವನ್ನು ಜಾರಿಗೆತರುವುದಾದರೂ ಇಡೀ ಸಂಸ್ಥಾನದಲ್ಲೆಲ್ಲಾ ಒಂದೇಸಾರಿ ಅಮಲಿಗೆ ತೆಗೆದುಕೊಂಡು ಬನ್ನಿ. ಹಾಗೆ ಮಾಡದೆ ಅರ್ಧಂಬರ್ಧ ಇಲ್ಲೊಂದುಸಾರಿ ಅಲ್ಲೊಂದುಸಾರಿ, ಈ ಜಿಲ್ಲೆಗೆ ಈವರ್ಷ, ಆ ಜಿಲ್ಲೆಗೆ ಇನ್ನೊಂದುವರ್ಷ ಮುಂದೆ ನೋಡೋಣವೆಂದು ಈ ಕಾನೂನುಗಳನ್ನು ಜಾರಿ ಮಾಡಬೇಡಿ. ಏಕೆಂದರೆ ಈಗಾಗಲೇ ಇದರಿಂದಲೇ ಅನೇಕ ಶ್ರೀಮಂತರು ಬೇಕಾದಷ್ಟು ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಬಡವರು ಕಷ್ಟನಷ್ಟಗಳನ್ನು ಹೊಂದುತ್ತಿದ್ದಾರೆ. ಅನೇಕಜನ ಮೋಸ ಹೊಂದಿ ತಮ್ಮ ಮನೆಮಠಗಳನ್ನು ಆಸ್ತಿಪಾಸ್ತಿಗಳನ್ನು, ಹಿಂದೆ ಸಂಪಾದಿಸಿ ಕೂಡಿಟ್ಟಿದ್ದ ಹಣವನ್ನೆಲ್ಲಾ ಕಳೆದುಕೊಳ್ಳುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ತಪ್ಪಿಸಿ ಬಡವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಿದರೆ ಎಲ್ಲಾ ಜನತೆಯನ್ನು ಆ ಮೂಲಕ ಉದ್ಧಾರ ಮಾಡಬಹುದು. ಕೊನೆಯದಾಗಿ ಸರ್ಕಾರದವರು ಈಗ ಪಾನನಿರೋಧದ ಬಗ್ಗೆ ಮಾಡಿರುವ ರೀತಿ ನೀತಿ ಮತ್ತು ಶಾಸನಗಳು ಖಂಡಿತವಾಗಿ ಯಶಸ್ವಿಯಾಗಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri PARTHASARATHY (Malleswaram).—Sir, I have very little to speak because my friends have already discussed all the aspects of this Bill. As a doctor, I would like to bring to the notice of the Excise Minister a few points which are worth considering.

As several of my friends pointed out, this piece-meal legislation has certain disadvantages. I certainly appreciate the spirit behind this Bill and I fully endorse the views expressed by the Minister when he introduced this Bill. I would say that it should be introduced uniformly throughout the State; it should be introduced in Bangalore City also. This city has increased in population to 16 or 17 lakhs because, as some of my friends said, the wheather is fine and salubrious and liquor is available. This attracts population to this City from outside. As some of my friends said, recently this City's population has less or Kannadigas than Tamilians and that is because the neighbouring State of Tamilnad has introduced prohibition. As a result, there is plenty of migration into this State not of intelligent people but of duffers. To-day you come to my street in Malleswaram and you will see thousands of lepers there. I asked them, "why do you come here? Have you no hospital?" and they said, "in the evening we get drinks here". They collect a few coins and the leprosium also allow them to go out and beg. In this city drinking is very well preserved and the only argument put forward in favour of it is, that tourism should be encouraged. If there is boldness, this city should go dry first.

I have gone round the world. I had been to the United States. I found that alcohol was being freely sold everywhere. They have not introduced any prohibition. Alcohol is sold in the streets but there I saw

something else. The people there have themselves imposed some self-restraint. That is a very essential thing. Apart from imposing this law, we should cultivate a habit in the people to have self-restraint. There, in the U.S.A. if people do not want to drink, they will not take to it. The reason might be food habits. The people are engaged in better occupations. So, my feeling is if people are better fed and proper work is provided, the craze for alcohol can be avoided. In our country the entire development is not balanced. We are introducing several legislations which have upset the life in cities and villages. For example this sudden introduction of prohibition is just like suddenly stopping the child from drinking mother's milk. Anything we do must be by stages. In major cities we have plenty of addicts who have taken to this alcohol. It is impossible to stop it suddenly. Once he takes to drinking he gets a craze for it.

Another peculiar thing that can be observed in this Bill is that you mention only about spirits and other alcoholic things. As doctor I can say that taking 100 per cent alcoholic drink is injurious to health. As doctor I know, I have been receiving a number of patients from rural parts who take excess of coffee and suffer from gastric troubles. When excess quantity of coffee is taken it spoils the system in stomach. The poor villagers do not know how much proportion they should use. There are some other factors which are injurious to the health apart from liquors, like smoking. I think along with this legislation if you want to improve the habits of people you should introduce legislations for such things also.

I close my speech with an earnest plea that this prohibition should be first introduced in Bangalore.

ಶ್ರೀ ಟಿ. ಜಿ. ಬೋತ್ (ಸಾದಲಗ).—ಅಧ್ಯಕ್ಷರೇ, ಈಗಾಗಲೇ ಈ ವಿಷಯದಲ್ಲ ನನ್ನ ಅನೇಕ ಸನ್ಮಾನ್ಯ ಮಿತ್ರರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದಾಗ್ಯೂ ಈಗ ತಂದಿರುವ ಪ್ರೊಹಿಬಿಷನ್ ಬಿಲ್ಲಿನಲ್ಲಿ ಕೇವಲ ಎರಡೇ ಎರಡು ಬಹಳ ಮುಖ್ಯವಾದ ವಿಚಾರಗಳಿವೆ. ಈ ಎರಡು ವಿಚಾರಗಳೇನೆಂದರೆ :— ಒಂದನೇಯದು ಈ ಪ್ರೊಹಿಬಿಷನ್ ಬೇಕೇ - ಬೇಡವೇ ಎಂಬುದು. ಎರಡನೇಯದು ಬೇಕಾಗಿದ್ದರೆ ಇದನ್ನು ಯಾವ ರೀತಿ ಜಾರಿಗೆ ತರಬೇಕು, ಬೇಡವಾಗಿದ್ದರೆ ಹೇಗೆ ಕೈಬಿಡಬೇಕು ಎಂಬುದೇ ಎರಡು ಮಹತ್ವದ ವಿಚಾರಗಳು. ಈ ಪ್ರೊಹಿಬಿಷನ್ ಬೇಡ ಅನ್ನೋ ವಿಚಾರದಲ್ಲಿ ಹೀಗೇ ಎಷ್ಟು ದಿವಸಗಳತನಕ ಇದನ್ನು ತಳ್ಳಿಕೊಂಡು ಬರಬೇಕು ಎಂಬ ವಿಚಾರ ಒತ್ತಟ್ಟಿಗಿರಲಿ. ಆದರೆ ಇಲ್ಲಿಯವರೆಗೂ ನಡೆದಿರತಕ್ಕ ಚರ್ಚೆಯನ್ನು ನೋಡಿದರೆ ಕೇವಲ ಒಬ್ಬಿಬ್ಬರನ್ನು ಬಿಟ್ಟು ಉಳಿದವರು ಯಾರೂ ಇದನ್ನು ಅಂಥ ಒಂದು ತಾಂತ್ರಿಕ ದೆಶೆಯಿಂದ ವಿರೋಧ ಮಾಡಿದಂತೆ ಕಂಡುಬರಲಿಲ್ಲ. ಈ ಪ್ರೊಹಿಬಿಷನ್ನನ್ನು ಜಾರಿಗೆ ತರುವ ವಿಚಾರದಲ್ಲಿ ನನಗಾದರೂ ಕೂಡ ಅಂಥ ತಾಂತ್ರಿಕವಾದ ಭಿನ್ನಾಭಿಪ್ರಾಯವೇನೂ ಇಲ್ಲ. ಪ್ರತಿಯೊಬ್ಬರಿಗೂ ಬೇಡವಾದುದನ್ನು ಅದು ಸ್ಮೋಕಿಂಗ್ ಆಗಿರಲಿ ಮತ್ತೆ ಯಾವುದೇ ಒಂದು ಕೆಟ್ಟ ಅಭ್ಯಾಸವಾಗಿರಲಿ ಅದರಿಂದ ಹೆಲ್ತ್ ಮತ್ತು ವೆಲ್ತ್ ನಾಶವಾಗುತ್ತೆಂದು ಕಂಡು ಬಂದರೆ ಅದನ್ನು ಜನರು ಆ ವ್ಯಸನ ಬಿಡಲಿಕ್ಕೇಬೇಕು. ಆದರೆ ಇಲ್ಲಿಯವರೆಗೂ ಮಾತನಾಡಿರತಕ್ಕ ಸದಸ್ಯರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಮತ್ತೆ ಯಾರೂ ಈ ಡ್ರಿಂಕಿಂಗ್ ಇರಬೇಕೆಂದು ವಾದ ಮಾಡಿದಂತೆ ನನಗೆ ಕಂಡು ಬರಲಿಲ್ಲ. ಆದುದರಿಂದ ನಮ್ಮ ಮುಂದೆ ಈಗಿರತಕ್ಕ ಒಂದೇ ಒಂದು ಪ್ರಶ್ನೆಯೇನೆಂದರೆ ಇದನ್ನು ಬಂದ್

(ಶ್ರೀ ಬಿ. ಡಿ. ಖೋತ್)

ಮಾಡಬೇಕೆಂದರೆ ಹೇಗೆ ಇದನ್ನು ಯಾವ ರೀತಿಯಲ್ಲಿ ಬಂದ್ ಮಾಡಬೇಕೆಂಬ ವಿಚಾರದಲ್ಲಿ ಕೆಲವರು ಕೆಲಕೆಲವು ಮಾರ್ಗಗಳನ್ನು ಸೂಚನೆ ಮಾಡಿದ್ದಾರೆ. ಆದರೆ ನಾವು ಮೊದಲನೇಯದಾಗಿ ಈಗ ಮುಖ್ಯವಾಗಿ ಆಲೋಚನೆ ಮಾಡಬೇಕಾದುದು ಹಾಲಿ ನಮ್ಮ ಮುಂದೆ ಬಂದಿರತಕ್ಕ ಬಿಲ್ಲಿನಲ್ಲಿ ಹೇಳಿರುವ ಕ್ಲಾಜುಗಳೇನಿವೆ ಅವುಗಳ ಮೂಲಕ ಪ್ರೊಹಿಬಿಷನ್ನನ್ನು ಎನ್‌ಫೋರ್ಸ್ ಮಾಡಲಿಕ್ಕೆ ಶಕ್ಯವಿದೆಯೇ ಅಥವಾ ಇಲ್ಲವೇ, ಹಾಗೆ ಶಕ್ಯವಿಲ್ಲದಿದ್ದರೆ ಮತ್ತೆ ಹ್ಯಾಗೆ ಮಾಡಬೇಕು ಅನ್ನುವುದೇ ಬಹು ಮುಖ್ಯವಾದ ಅಂಶ. ಆದರೆ ಈ ವಿಚಾರ ಚರ್ಚೆ ಮಾಡಲಿಕ್ಕೆ ಹೋದರೆ ಈ ಬಗ್ಗೆ ಏನೊಂದಂಶ ಸರ್ಕಾರದವರು ಹೇಳಿದ್ದಾರೆಂದರೆ ದೇಶಾದ್ಯಂತವೂ ಒಂದು ಯೂನಿಫಾರಂ ಕಾಯಿದೆಯನ್ನು ಜಾರಿಗೆ ತರೋವರ ದೆಶೆಯಿಂದ ಈ ಬಿಲ್ಲನ್ನು ತರಲಾಗಿದೆ ಎಂದು ಹೇಳಿದ್ದಾರೆ. ಸರ್ಕಾರದವರ ಉದ್ದೇಶ ಹಾಗಿದ್ದರೆ ಮೊದಲು ಅವರು ಹಾಲಿ ದೇಶದಲ್ಲಿ ಯಾವ ಯಾವ ಭಾಗಗಳು ವೆಟ್ ಆಗಿವೆಯೋ ಅವುಗಳನ್ನೆಲ್ಲ ಡ್ರೈ ಮಾಡಬೇಕೆಂದು ಕೂಡಲೆ ಅವರು ಒಂದು ಆರ್ಡರನ್ನು ಹೊರಡಿಸಬೇಕು. ಈಗ ಸರ್ಕಾರದವರೇನು ಈ ಒಂದು ಬಿಲ್ಲನ್ನು ತಂದಿದ್ದಾರೋ ಇದರ ಘೋಷಣೆಗಾಗಿ ಮತ್ತು ಇದರ ಹೆಲ್ಪಿಗಾಗಿ ಅವರು ಕೂಡಲೆ ದೇಶದಲ್ಲಿರತಕ್ಕ ವೆಟ್ ಏರಿಯಾಗಳನ್ನೆಲ್ಲಾ ಡ್ರೈ ಮಾಡಲು ನಾಳೇ ದಿವಸವೇ ಒಂದು ಆರ್ಡರನ್ನು ಹೊರಡಿಸಿ ಅದನ್ನು ಎನ್‌ಫೋರ್ಸ್ ಮಾಡಿಸಬೇಕು.

ಇನ್ನು ಎರಡನೇ ವಿಚಾರ ಏನೆಂದೆ ಅಂದರೆ ಈ ಹಿಂದೆಯೇ ಈ ಬಿಲ್ಲು ಬಂದಿದ್ದಾಗ ಆಗ್ಗೆ "ಇದು ನಮ್ಮ ಆಲ್‌ಇಂಡಿಯಾ ಪಾಲಿಸಿ, ಡೈರೆಕ್ಟೀವ್ ಪ್ರಿನ್ಸಿಪಲ್" ಎಂತ ಹೇಳಲಾಗಿತ್ತು. ಹಾಗಿರುವಾಗ ಇಂಡಿಯಾ ಸರ್ಕಾರದವರೇ ಸಮಗ್ರ ಭಾರತಕ್ಕೆಲ್ಲ ಅನ್ವಯವಾಗುವಂತೆ ಒಂದು ಕಾನೂನನ್ನು ಜಾರಿಗೆ ತರಲು ಅವರಿಗೆ ಶಕ್ಯವಿದೆ. ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತೆ. ಹೀಗೆ ಮಾಡಿದರೆ ಬೇರೆ ಬೇರೆ ಸ್ಟೇಟುಗಳವರಿಗೆ ತೊಂದರೆ ತಪ್ಪಿ ಅವರಿಗೆ ಇದರಿಂದ ಹೆಚ್ಚಿನ ಲಾಭವಾಗುತ್ತದೆ. ಹಾಗಲ್ಲದೆ ಒಂದೊಂದು ಸ್ಟೇಟಿನವರೇ ಇದನ್ನು ಜಾರಿಗೆ ತರಬೇಕೆಂದರೆ ಅವರಿಗೆ ಸ್ವಲ್ಪ ಕಷ್ಟವಾಗಬಹುದು. ಆದರೆ ಈಗ ಸ್ಟೇಟ್ ಸರ್ಕಾರಗಳೂ ಈ ವಿಚಾರದಲ್ಲಿ ಕೈಹಾಕಲು ಅವಕಾಶವಾಗುವಂತೆ ಇದನ್ನು ಸ್ಟೇಟ್ ಲಿಸ್ಟಿನಲ್ಲಿ ಸೇರಿಸಿ, ಅನುಕೂಲ ಮಾಡಿದ್ದಾರೆ. ಆ ದೆಶೆಯಿಂದ ಈಗ ನಮ್ಮ ಸರ್ಕಾರದವರು ಒಂದು ಬಿಲ್ಲನ್ನು ತಂದಿದ್ದಾರೆ. ಈಗ ನಮ್ಮ ಸರ್ಕಾರ ಮುಂದೆ ಬಂದಿರುವುದರಿಂದ ಇವರು ಮೊದಲನೇ ಪ್ರದೇಶಗಳನ್ನು ಡ್ರೈ ಮಾಡಬೇಕು.

5–30 P.M.

ಪಾನನಿರೋಧ ಮಾಡಲು ನನ್ನ ಎರಡನೆಯ ಸೂಚನೆಯೇನೆಂದರೆ ಅದಕ್ಕೆ ಎರಡು ಮಾರ್ಗಗಳಿವೆ- ಒಂದು ಪ್ರೀಚಿಂಗ್, ಮತ್ತೊಂದು ಕಾನೂನಿಂದ ಕಂಟ್ರೋಲ್, ಕಂಟ್ರೋಲ್ ದೆಶೆಯಿಂದ ಸಿಬ್ಬಂದಿಗೆ ಎರಡನೆಯ ಛಾಪ್ಟರಿನಲ್ಲಿ ಅವಕಾಶವಾಡಿದೆ. ಆದರೆ ಪ್ರೀಚಿಂಗಿಗೆ ಅಂದರೆ ಸೋಷಿಯಲ್ ವರ್ಕ್ಸ್‌ಗೆ ಈ ಮಸೂದೆಯಲ್ಲಿ ಎಲ್ಲಿಯೂ ಅವಕಾಶ ಕಲ್ಪಿಸಿಲ್ಲ ಕಂಟ್ರೋಲ್ ಬೇಡವೆಂದು ನಾನು ಹೇಳುತ್ತಿಲ್ಲ. ಅದು ಬೇಕು. ಏಕೆಂದರೆ ಔಷಧಿ ಎಷ್ಟೇ ಕಹಿಯಾದರೂ ರೋಗನಿವಾರಣೆ ಮಾಡಲು ರೋಗಿಗೆ ಅದನ್ನು ಮೂಗು ಹಿಡಿದುಕೊಂಡು ಕುಡಿಸಲೇಬೇಕು. ಪಾನನಿರೋಧ ಯಶಸ್ವಿಯಾದ ರೀತಿಯಲ್ಲಿ ಜಾರಿಗೆ ಬರಬೇಕಾದರೆ ಕಂಟ್ರೋಲ್ ಬೇಕು, ಸರ್ಕಾರ ಕಾಯಿದೆ ಕೊಡಬೇಕು, ಎಲ್ಲವೂ ಸುಗಮ ರೀತಿಯಿಂದ ನಡೆಯಲು ವ್ಯವಸ್ಥೆ ಮಾಡಲೇಬೇಕು. ಆದರೆ ಸದಾಸರ್ವದ ಪಾನನಿರೋಧ ಮುಂದುವರಿಸಬೇಕಾದರೆ ಉದ್ದೇಶಗಳು ಮತ್ತು ಕಾರಣಗಳ ವಿವರದಲ್ಲಿ ಹೇಳಿರುವಂತೆ ಪೋಲೀಸ್ ಸಿಬ್ಬಂದಿ ವಗೈರೆಗೆ ಕೋಟಿಗಟ್ಟಲೆ ಹಣ ಖರ್ಚಾಗುವುದು. ಈ ಕೆಲಸವನ್ನು ರಿಲಿಜಿಯಸ್ ಮತ್ತು ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗೆ ವಹಿಸಲು ಅವಕಾಶ ಮಾಡಿ ಆ ಸಮಸ್ಯೆಗಳ ಮುಖಾಂತರ ಕೆಲಸ ನಿರ್ವಹಿಸಿದರೆ ಬಹಳ ಸುಲಭ ಖರ್ಚಿನಲ್ಲಿ ಕೆಲಸವಾಗುತ್ತದೆ ಮತ್ತು ಉತ್ತಮ ರೀತಿಯಿಂದ ನಡೆಯುತ್ತದೆ.. ಧಾರ್ಮಿಕ ಸಂಸ್ಥೆಗಳು ಮತ್ತು ವಿದ್ಯಾಸಂಸ್ಥೆಗಳಿಗೆ ಪ್ರಾಧಾನ್ಯತೆ ಕೊಟ್ಟು

ಪಾನನಿರೋಧ ಕಾರ್ಯವನ್ನು ಅವಕ್ಕೆ ವಹಿಸಿದರೆ ಬರಾಬರಾಗಿ ಕೆಲಸವಾಗಿ ಯಶಸ್ವಿಯಾಗುತ್ತದೆ. ಈ ಬಗ್ಗೆ ವಿಶೇಷ ಗಮನ ಕೊಡಬೇಕು. ಇಂಡಿಯಾದೇಶದಲ್ಲಿ ಎಲ್ಲಾ ಕಡೆಯ ಪರಿಸ್ಥಿತಿಯನ್ನು ವಿಚಾರಮಾಡಿದರೆ ಕೇವಲ ಕಾಯಿದೆ ಮಾಡುವುದರಿಂದಲೇ ಪಾನನಿರೋಧ ಜಾರಿಗೆ ತರಲು ಸಾಧ್ಯವಿಲ್ಲ. ಈ ದಿವಸ ಕಾಯಿದೆ ಪಾಸ್ ಮಾಡಬಹುದು ಅಥವಾ ಬಿಡಬಹುದು, ಆದರೆ ಕುಡಿಯುವುದನ್ನು ಬಿಡಿಸಬೇಕಾದರೆ, ಕುಡಿತದ ದುಶ್ಚಟವನ್ನು ಹೋಗಲಾಡಿಸಬೇಕಾದರೆ ಜನರ ಜೀವನದ ಸಂಸ್ಕೃತಿಯ ಮಟ್ಟ ಸುಧಾರಿಸಬೇಕು. ಅವರ ನೈತಿಕಮಟ್ಟ ಹೆಚ್ಚಿಸಬೇಕು. ಇದೇ ಸರಿಯಾದ ಮಾರ್ಗ. ಧಾರ್ಮಿಕ ಮತ್ತು ವಿದ್ಯಾ ಸಂಸ್ಥೆಗಳೇನಿವೆ ಅವಕ್ಕೆ ಈ ಕಾರ್ಯವನ್ನು ವಹಿಸಿ, ತಕ್ಕಷ್ಟು ಹಣ ಒದಗಿಸಿ, ಒತ್ತಾಯವಾಗಿ ಅವುಗಳ ಕಡೆಯಿಂದ ನಡೆಸಿದರೆ ಹೆಚ್ಚು ಫಲಕಾರಿಯಾದೀತು ಮತ್ತು ಸುಲಭ ರೀತಿಯಲ್ಲಿ ಪರಿಣಾಮಕಾರಿಯಾಗಿ ನಡೆದೀತು. ಕೇವಲ ಕಾಯಿದೆಯಿಂದ ಪರಿಣಾಮಕಾರಿಯಾಗಿ ಜಾರಿಗೆ ತರಲು ಶಕ್ಯವಿಲ್ಲ. ಆದುದರಿಂದ ವಿಶೇಷ ರೀತಿಯಲ್ಲಿ ಇದಕ್ಕೆ ಪ್ರಾವಿಷನ್ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ವಿಚಾರ ಮಾಡಬೇಕು.

ಮತ್ತೊಂದು ವಿಷಯ, ಇದು ವಿಶೇಷತಃ ಸಮಾಜಿಕ ಮತ್ತು ನೈತಿಕ ಕಾರ್ಯ. ಆದುದರಿಂದ ಧಾರ್ಮಿಕ ಮತ್ತು ವಿದ್ಯಾ ಸಂಸ್ಥೆಗಳವರು ಕುಡಿಯುವವರಲ್ಲಿ ಕೇವಲ ಶೇಕಡ ಒಬ್ಬರನ್ನಾದರೂ ಹಿಡಿಯುತ್ತಾರೋ, ಇಲ್ಲವೋ ಎಂಬ ಸಂಶಯವಿದೆ. ಕುಡಿಯುವುದು ಸರಿಯಲ್ಲ, ಕೆಟ್ಟದ್ದು ಎಂಬುದು ಎಲ್ಲರಿಗೂ ಗೊತ್ತಿದೆ. ಇದನ್ನು ತಪ್ಪಿಸುವ ವಿಚಾರದಲ್ಲಿ ಎಲ್ಲರ ಸಹಾನುಭೂತಿಯೂ ಇದೆ. ಆದರೆ ಎನ್‌ಫೋರ್ಸ್ ಮಾಡುವ ಪ್ರಶ್ನೆ ಬರುತ್ತದೆ. ಇದನ್ನು ಧಾರ್ಮಿಕ ಮತ್ತು ವಿದ್ಯಾಸಂಸ್ಥೆಗಳು ಹೊರತು ಎರಡನೆ ಯಾವ ಸಂಸ್ಥೆಯಾಗಲಿ ಅಥವಾ ಸರ್ಕಾರವಾಗಲಿ ಸರಿಯಾಗಿ ನಿರ್ವಹಿಸಲು ಅವಕಾಶವಿಲ್ಲ ಎಂಬ ಅಭಿಪ್ರಾಯವಿದೆ.

ಇನ್ನೊಂದು ಈ ಮಸೂದೆಯ ಎಲ್ಲಾ ಕ್ಲಾಜುಗಳನ್ನು ನೋಡಿದರೂ ಕೂಡ ಒಂದು ವಿಷಯದಲ್ಲಿ ಪ್ರಾವಿಷನ್ ಮಾಡಿರುವಂತೆ ಕಾಣಿಸಲಿಲ್ಲ. ಪ್ರೊಹಿಬಿಷನ್ ಕಮಿಷನರ್, ಡೆಪ್ಯುಟಿ ಕಮಿಷನರ್, ಬೋರ್ಡ್ ಆಫ್ ಎಕ್ಸ್‌ಪರ್ಟ್ಸ್ ಯಾರೇ ಇದ್ದರೂ ಈ ನಿರೋಧ ಕಾರ್ಯವನ್ನು ನೋಡಿಕೊಳ್ಳುವವರು ಕುಡಿಯಬಾರದೆಂದು ಎಲ್ಲೂ ಹೇಳಿರುವಂತೆ ಕಂಡುಬರಲಿಲ್ಲ. ಈ ಕೆಲಸ ನಿರ್ವಹಿಸುವವರು ಕುಡಿಯಬಾರದೆಂದು ಒತ್ತಾಯವಿಲ್ಲ. ಯಾರು ಕಾಯಿದೆ ಮಾಡುತ್ತಾರೋ, ಯಾರು ಈ ತತ್ವ ಮಾನ್ಯ ಕೊಡುವರೋ ಅವರು ಮೊದಲು ಕುಡಿಯಬಾರದು. Charity should begin at home. ಮೊದಲು ಈ ನಿರೋಧ ಕಾರ್ಯದಲ್ಲಿ ತೊಡಗುವ ಸಿಬ್ಬಂದಿ ಪ್ರಾಕ್ಟೀಸ್ ಮಾಡಬೇಕು. ಹಾಗಿಲ್ಲದೆ ಸಿಬ್ಬಂದಿಯೇ ಕುಡಿದರೆ ಹೇಗೆ ಯಶಸ್ವಿಯಾಗಿ ನಿರೋಧವನ್ನು ಜಾರಿಗೆ ತರಲು ಸಾಧ್ಯ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಪ್ರಾವಿಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಬಿಲ್ ಆಗುವುದು ಡ್ರೈ ಏರಿಯಾದಲ್ಲಿ. ಉಳಿದಕಡೆಯವರು ಕುಡಿಯಬಹುದೆಂದು ಅರ್ಥವಾಗುತ್ತದೆ. ಪಾನನಿರೋಧ ಜಾರಿಯಲ್ಲಿರುವ ಕಡೆ ಎನ್‌ಫೋರ್ಸ್ ಕೊಡುವವರೂ ಸಹ ಕುಡಿಯುವಂತಿಲ್ಲ, ಯಾರೂ ಕುಡಿಯಬಾರದೆಂಬ ಉದ್ದೇಶದಿಂದಲೇ ಈ ಮಸೂದೆಯನ್ನು ತಂದಿರುವುದು.

ಶ್ರೀ ಬಿ. ಬಿ. ಖೋತ್.—ಈ ದಿವಸ ಈ ಮಸೂದೆ ಅಂಗೀಕಾರ ಮಾಡುತ್ತೇವೆ. ನಮ್ಮ ಸಂಸ್ಥಾನದಲ್ಲಿ ಮೂರು ವೆಟ್ ಏರಿಯಾಗಳಿವೆ. ಆದುದರಿಂದ ಈ ಮಸೂದೆ ಜಾರಿಗೆ ಬಂದರೂ ಇಡೀ ರಾಜ್ಯದಲ್ಲೆಲ್ಲಾ ಪಾನ ನಿರೋಧವನ್ನು ಜಾರಿಗೆ ತರುವವರೆಗೂ ಯಶಸ್ವಿಯಾಗಿ ನಿರೋಧವನ್ನು ಜಾರಿಗೆ ತರಲು ಶಕ್ಯವಿಲ್ಲ. ಇದರ ಕಡೆ ಲಕ್ಷ ಕೊಡಬೇಕು. ಮಂತ್ರಿಗಳಾಗಲಿ, ಸರ್ಕಾರಿ ಅಧಿಕಾರಿಗಳಾಗಲಿ, ಮೆಡಿಕಲ್ ಸರ್ಟಿಫಿಕೇಟ್ ತರುವವರಾಗಲಿ, ಯಾರೆ ಕುಡಿದರೂ ಸಹ ಅದು ವಿರೋಧವಾಗುತ್ತದೆ, ತಪ್ಪಾಗುತ್ತದೆ. ಇದಕ್ಕೆ ಯೋಗ್ಯ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಏಕೆ ಕುಡಿಯುವುದು ಸರಿಯಲ್ಲ ? ಕುಡಿಯಕೂಡದು ಎಂದು ಹೇಳುವವರು ಮೊದಲು ಅವರು ಅದನ್ನು ಪ್ರಾಕ್ಟೀಸ್‌ಗೆ ತರಬೇಕು. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಮ್ಮೆ ಗಾಂಧೀಜಿ

(ಶ್ರೀ ಟಿ. ಡಿ. ಜೋತ್)

ಯವರು ಸಬರ್ಮತಿ ಆಶ್ರಮದಲ್ಲಿದ್ದಾಗ ಒಂದು ವಿಶೇಷ ನಡೆಯಿತು. ಗುಜರಾತ್ ಪ್ರಾಂತ ಬೆಲ್ಲ, ಸಕ್ಕರೆ ತಿನ್ನುವ ರೂಢಿ ಹೆಚ್ಚು, ಅನ್ನ ಕಾಯಿ ಪಲ್ಯ ಆದಿ ಎಲ್ಲದರಲ್ಲಿಯೂ ಹಸಿಪಳದಕ್ಕೂ ಬೆಲ್ಲ ಹಾಕುತ್ತಾರೆ. ಸಾಮಾನ್ಯ ಜನರು ಬೆಲ್ಲ ಹೆಚ್ಚಾಗಿ ಉಪಯೋಗಿಸುತ್ತಾರೆ. ಅನುಕೂಲಸ್ಥರು ಸಕ್ಕರೆ ಹೆಚ್ಚಾಗಿ ಉಪಯೋಗ ಮಾಡುತ್ತಾರೆ. ಒಬ್ಬ ಹುಡುಗ 12 ತಾಸೂ ಬಾಯಲ್ಲಿ ಬೆಲ್ಲ ಇಟ್ಟು ಕೊಂಡಿರುತ್ತಿದ್ದ, ಅದರಿಂದ ಅವನು ರೋಗಿಯಾದ, ಆಗ ಅವನ ತಾಯಿ ಅವನನ್ನು ಗಾಂಧಿ ಹತ್ತಿರಕ್ಕೆ ಆಶ್ರಮಕ್ಕೆ ಕರೆದುಕೊಂಡು ಬಂದು ಸ್ವಲ್ಪ ಉಪದೇಶ ಮಾಡಿ ಬೆಲ್ಲ ತಿನ್ನುವುದನ್ನು ಬಿಡುವಂತೆ ತಾಕೀತು ಮಾಡಬಡಿಸಿ ಎಂದು ಗಾಂಧಿಯವರಿಗೆ ಹೇಳಿದಳು. ಹೇಳಿದನಂತರ ಗಾಂಧೀಜಿ ಹೇಳಿದರು, ಇನ್ನು ಎಂಟು ದಿವಸಗಳಲ್ಲಿ ಹೇಳುತ್ತೇನೆ, ಆಗ ಹುಡುಗನನ್ನು ಕರೆದುಕೊಂಡು ಬಾ ಎಂದು ಹೇಳಿದರು. ಎಂಟು ದಿವಸಗಳಾದನಂತರ ಹೋದಾಗ ಹುಡುಗನಿಗೆ ಗಾಂಧೀಜಿ ಉಪದೇಶ ಮಾಡಿದರು-ಬೆಲ್ಲವನ್ನು ತಿನ್ನಬೇಡ ರೋಗ ಬರುತ್ತದೆ. ತಿನ್ನುವುದನ್ನು ಬಂದ್ ಮಾಡು ಎಂದು ಹೇಳಿದರು. ಹೀಗೆ ಹೇಳಿದ ನಂತರ ಹುಡುಗನನ್ನು ತಮ್ಮಲ್ಲಿ ಎರಡು ದಿವಸ ಇಟ್ಟುಕೊಂಡು ಸಮಾಧಾನ ಹೇಳಿ ಅವನು ಬೆಲ್ಲ ತಿನ್ನುವುವನ್ನು ಬಿಡಿಸಿದರು. ಆ ಹುಡುಗನ ಅಪ್ಪ 'ಎಂಟು ದಿವಸದ ಮೇಲೆ ಬಾ ಎಂದು ಹೇಳಿದಿರಿ, ಇದಕ್ಕೆ ಕಾರಣವೇನು' ಎಂದು ಗಾಂಧೀಜಿಯನ್ನು ಕೇಳಿದಾಗ ಹುಡುಗನಿಗೆ ಹೇಳುವುದಕ್ಕಿಂತ ಮುಂಚೆ ನಾನು ಬಿಡುವುದಕ್ಕೆ ಸಾಧ್ಯವೆ ಎನ್ನುವುದನ್ನು ನೋಡಬೇಕಾಗಿತ್ತು. ಬಿಡುವುದಕ್ಕೆ ಶಕ್ಯವಿದೆಯೆ ಎನ್ನುವುದನ್ನು ವಿಚಾರಮಾಡಿ, ಅದು ಖಾತ್ರಿಯಾದ ಮೇಲೆ ಹೇಳಬೇಕೆಂದು ಎಂಟು ದಿನಗಳಾದ ಮೇಲೆ ಬಾ ಎಂದು ಹೇಳಿದೆ ಎಂದು ಉತ್ತರಿಸಿದರು. ಹಾಗೆ, ಪಾನನಿರೋಧವನ್ನು ಜಾರಿಗೆ ತರಲು ಕಾಯಿದೆ ಮಾಡುವುದೇನೋ ಸರಿ. ರಾಷ್ಟ್ರದ ಹಿತವಾಗಬೇಕೆಂದು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇದೆ. ಆದರೆ ಯಾವ ರೀತಿಯಿಂದ ಇದನ್ನು ಜಾರಿಗೆ ತರಬೇಕು, ಯಾವ ರೀತಿ ಕಾರ್ಯ ಸಿದ್ಧಿಯಾಗಬೇಕೆಂಬುದು ಮುಖ್ಯ. ಈ ಕಾಯಿದೆ ಮಾಡಿದರೆ ಎಲ್ಲರೂ, ಪ್ರತಿಯೊಬ್ಬ ಅಧಿಕಾರಿಯೂ ಕುಡಿಯುವುದನ್ನು ಬಿಟ್ಟುಬಿಡುತ್ತಾರೆಂದು ಖಾತರಿಯಾಗಬೇಕು. ಯಾರೂ ಯಾವುದಾದರೂ ಮಾರ್ಗದಿಂದಲೂ ಕುಡಿಯಬಾರದು. ಇದನ್ನು ಮನಃಪೂರ್ವಕ ಜಾರಿ ಮಾಡುವ ಶ್ರದ್ಧೆ ಜನರಲ್ಲಿರಬೇಕು. ಸಂಬಂಧಪಟ್ಟ ಜನರು ಇದರಲ್ಲಿ ಈ ವಿಷಯದಲ್ಲಿ ಶ್ರದ್ಧೆಯಿಟ್ಟು ಆ ಪ್ರಕಾರ ವಿಚಾರಿಸಿ, ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಾರೋ ಇದನ್ನು ಜಾರಿ ಮಾಡುವುದಕ್ಕೆ ಅಷ್ಟು ಮಟ್ಟಿಗೆ ಇದು ಯಶಸ್ವಿಯಾಗುತ್ತದೆ. Wet area dry ಮಾಡಿದ ಎಲ್ಲಿಯೂ ಕೂಡ ಯಶಸ್ವಿಯಾಗಲಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಹೀಗೆ ಕಾರಣವಿಲ್ಲದೆ ಸಾರ್ವಜನಿಕ ಹಣವನ್ನು ಹೀಗೇಕೆ ನಷ್ಟಮಾಡಬೇಕು ! ಯಾರು ಅಧಿಕಾರ ಉಪಯೋಗ ಮಾಡುತ್ತಾನೋ ಅವನು ಮುಂಚೆ ಇದರ ಕಡೆ ಲಕ್ಷ್ಯ ಕೊಡಬೇಕು. ಇದರಲ್ಲಿ ಆ ಜನರಿಗೆ ಮನಃಪೂರ್ವಕವಾದ ನಂಬಿಕೆ ಇರಬೇಕು ; ಅವರು ಮೊದಲು ಮಾನ್ಯ ಕೊಡಬೇಕು. ಆ ಪ್ರಕಾರ ಆಚರಿಸಬೇಕು ಇದನ್ನೆಲ್ಲಾ ಪರೀಕ್ಷೆ ಮಾಡಿ ಯೋಗ್ಯ ರೀತಿಯಲ್ಲಿ ಜಾರಿ ಮಾಡಬೇಕು. ಅನೇಕ ಪರರಾಷ್ಟ್ರಗಳಲ್ಲಿ ಪಾನನಿರೋಧ ಮಾಡದೆ ಹಾಗೆಯೇ ಇಟ್ಟಿದ್ದಾರೆ. Drinking improves the health it adds to the beauty of men and women ಎಂದು ಹೇಳಿ ಅದನ್ನು ಪ್ರತಿಪಾದನೆ ಮಾಡಿದವರೂ ನಮ್ಮಲ್ಲಿದ್ದಾರೆ. ಆದರೆ I, wonder to hear all these things. ಕುಡಿಯುವುದರಿಂದ ಸೌಂದರ್ಯ ಮತ್ತು ಆರೋಗ್ಯ ಉತ್ತಮವಾಗುತ್ತದೆಂದು ಹೇಳಿದರೆ ನಾವು ಆರೋಗ್ಯಕ್ಕಾಗಿ ಹಣ್ಣುಗಳು, ಹಾಲು, ಬೆಣ್ಣೆ ಇತ್ಯಾದಿ, ಎಲ್ಲವನ್ನೂ ಅನಾದಿಕಾಲದಿಂದ ಸೇವನೆ ಮಾಡುತ್ತಿರುವುದನ್ನು ಬಿಟ್ಟು ಮಧ್ಯಪಾನ ಮಾಡಬೇಕಾಗುತ್ತದೆ. ಇಂಥ ಅನುಭವ ನಮಗಿಲ್ಲ. ನಮ್ಮ ಮತ್ತು ನಮ್ಮ ರಾಷ್ಟ್ರದ ಹಿತಕ್ಕೆ ಈ ಮಧ್ಯಪಾನ ಘಾತುಕವಾದುದು. ಈ ಕಾನೂನಿನ ಉದ್ದೇಶ ಯೋಗ್ಯವಾದುದು ; ಆದರೆ ಇದನ್ನು ಜಾರಿ ಮಾಡುವ ಕಾರ್ಯ ಮಾತ್ರ ದಕ್ಷತೆಯಿಂದ ಆಗಬೇಕೆಂದು ಈ ಕಡೆ ಸರ್ಕಾರ ಲಕ್ಷ್ಯ ಕೊಡ

ಬೇಕು. ಹಾಗಿಲ್ಲದಿದ್ದರೆ ಸರ್ಕಾರದ ಕಾಯಿದೆ ಅಪಹಾಸ್ಯಕ್ಕೆ ಗುರಿಯಾಗುತ್ತದೆ. ಪಾನನಿರೋಧ ವಾಗಬೇಕೆಂಬುದು ಎಲ್ಲರಿಗೂ ಮಾನ್ಯವಾದುದು. ಆದರೆ ಬರಿಯ ಕಾನೂನು ಮಾಡುವುದು ಮುಖ್ಯವಲ್ಲ...................

Sri C. M. ARUMUGHAM.—What about smoking ?

Sri B. G. KHOT.—My friend asks about smoking. ಅಮೇರಿಕದವರು ಸಿಗಾರ್ ಸೇದುವುದರಿಂದ ಕ್ಯಾನ್ಸರ್ ವ್ಯಾಧಿ ಬರುತ್ತದೆಂದು ಹೇಳುತ್ತಿದ್ದಾರೆ.

Sri C. M. ARUMUGHAM.—He is coming from an area where they grow more of tobacco. If a Bill is brought to prohibit even smoking, then we must stop cultivation of tobacco. Is he prepared for such a contingency ?

Sri B. G. KHOT.—Tobacco in my area is a rotation crop.

Sri S. D. KOTHAWALE.—You can talk about the prohibition Bill, not about tobacco.

ಶ್ರೀ ಬಿ. ಜಿ. ಖೋತ್.—ಸರ್ಕಾರದವರು ತಮಗೆ ಶಕ್ತಿಯಿದ್ದಷ್ಟು ಲಕ್ಷ್ಯಕೊಟ್ಟು ಇದರ ಜಾರಿ ಯೋಗ್ಯರೀತಿಯಿಂದ ಆಗುವಂತೆ ಮಾಡಿದರೆ ಇದು ಯಶಸ್ವಿಯಾದೀತು. ಸರ್ಕಾರ ಸರ್ಕಾರಿ ಅಧಿಕಾರಿಗಳು, ಎಲ್ಲರೂ ನಿಷ್ಠೂರತನದಿಂದ, ನಿರ್ದಾಕ್ಷಿಣ್ಯದಿಂದ ಪ್ರಯತ್ನಪಾಡಿ ಇದನ್ನು ಸರಿಯಾಗಿ ಜಾರಿ ಮಾಡಬೇಕು.

ಮತ್ತೊಂದು ವಿಷಯವನ್ನು ತಿಳಿಯಬೇಕಾಗಿದೆ. ಕುಡಿತವೆಂಬ ವ್ಯಸನ ಅಂದರೆ ಕುಡಿಯುವುದು ಅಪರಾಧವೆ ಅಥವ ಈ ವ್ಯಸನದಿಂದ ಮಾಡುವ ಕೃತ್ಯ ಅಪರಾಧವೆ ?

Sri VEERENDRA PATIL.—Drinking is an offence.

ಶ್ರೀ ಬಿ. ಜಿ. ಖೋತ್.—ಆಗಲಿ, ಇದನ್ನು ತಾವು ವಿಚಾರಮಾಡಬೇಕು.

ಶ್ರೀ ವೀರೇಂದ್ರ ಪಾಟೀಲ್.— ಮಾದಕ ಪದಾರ್ಥಗಳನ್ನು ಮಿತಿಯಾಗಿ ತೆಗೆದುಕೊಂಡರೆ ಅಪರಾಧ ಕೃತ್ಯಗಳನ್ನು ಮಾಡುವುದಿಲ್ಲವೆಂದು ಹೇಳಿದ್ದಾರೆ. ಕುಡಿದು ಯಾರಾದರೂ ಅಪರಾಧ ಮಾಡಿದರೆ, ಅಂಥ ಪ್ರತಿಯೊಬ್ಬರೂ ತಾವು ಮಿತಿಯಾಗಿಯೇ ಮದ್ಯವನ್ನು ತೆಗೆದುಕೊಂಡಿದ್ದೇವೆಂದ ಹೇಳುತ್ತಾರೆ.

ಶ್ರೀ ಬಿ. ಜಿ. ಖೋತ್.—Offence, ಎಂದರೆ, ಅಪರಾಧ ಯಾವುದರಲ್ಲಿ ಬರುತ್ತದೆ? ಕುಡಿತವೇ ಅಪರಾಧವೇ ಅಥವಾ ಕುಡಿದು ಮಾಡಿದ ಕೃತ್ಯ offence ಎಂದರೆ ಅಪರಾಧವೇ ?

ಮತ್ತೊಂದು ವಿಷಯ ಏನೆಂದರೆ ಸ್ವೀಡನ್, ಇಂಗ್ಲೆಂಡ್ ಅಮೇರಿಕಾ ಈ ರಾಷ್ಟ್ರದೊಳಗೆ ಅವರ ಹವಾಗುಣಕ್ಕೆ ಅನುಗುಣವಾಗಿ ಡ್ರಿಂಕಿಂಕ್ ಯೋಗ್ಯ ಇರಬಹುದು. ಆದರೂ ನಹ ನಮ್ಮಲ್ಲಿ ಇದು ಏನು ಒಂದು ಚಟ ಅಥವಾ ಹ್ಯಾಬಿಟ್ಟಾಗಿ ಬಂದು ನಮಗೆ ಅಷ್ಟು ಅಕಷ್ಟಮ್ ಆಗಿದೆ ಅದು ನಮ್ಮ ಇಲ್ಲಿಯ ಉಷ್ಣ ಶಖೆಯಂಥ ಹವಾಗುಣಕ್ಕನುಗುಣವಾಗಿ ಸರಿಯಾಗಿಲ್ಲ. ಇದರೊಳಗೆ ಕೂಡುವುದಿಲ್ಲ. ಇದು ಬರೀ ಭ್ರಮೆ ಅಲ್ಲದೆ ಹಣ, ಆರೋಗ್ಯ, ಕೌಟುಂಬಿಕ ಸುಖವೆಲ್ಲವನ್ನೂ ಹಾಳುಮಾಡುತ್ತದೆ. ಆದ್ದರಿಂದ ಇದಕ್ಕೆ ನಾವು ಯಾವರೀತಿಯಿಂದಲೂ ಉತ್ತೇಜನ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೊಗೇ ಸೊಪ್ಪನ್ನು ಉಪಯೋಗಿಸುವುದರಲ್ಲಿ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ಜಿ. ಖೋತ್.—ಇಂಟಾಕ್ಸಿಕೇಷನ್ ಎಂಬುದು ಎಲ್ಲಾ ಪದಾರ್ಥಗಳಲ್ಲಿಯೂ ಇವೆ. ಹಾಲು ತುಪ್ಪ, ಅನ್ನ ಇವುಗಳನ್ನು ಊಟಮಾಡಿದರೂ ಅವುಗಳಲ್ಲಿಯೂ ಕಹಿ ಅಥವಾ ಕೈಫ್ ಇದ್ದೇ ಇದೆ. ಸಾಮಾನ್ಯವಾಗಿ ಎಲ್ಲದರಲ್ಲಿಯೂ ಕಹಿ ಇದ್ದೇ ಇರುತ್ತದೆ. ಆದರೆ ಅನ್ನ ಊಟ

(ಶ್ರೀ ಬಿ. ಜಿ. ಜೋತ್)

ಮಾಡಿದರೆ ಬುದ್ಧಿ ಭ್ರಮೆ ಆಗುವುದಿಲ್ಲ. ಈಗ ಲಿಕ್ಕರ್ ಇದೆ. ಅದು ಇಂಟಾಕ್ಸಿಕೇಟಿಂಗ್ ವಸ್ತು. ಇದನ್ನು ಸೇವನೆ ಮಾಡಿದರೆ ಬುದ್ಧಿ ಭ್ರಮೆ ಆಗುತ್ತದೆ. ವಸ್ತು ಸ್ವರೂಪ ಇಂಟಾಕ್ಸಿಕೇಟಿಂಗ್ ಗುಣವನ್ನು ಹೊಂದಿದೆ. ಅದಕ್ಕೇ ಪ್ರೊಹಿಬಿಷನ್ ಬೇಕು ಎಂಬುದು ಇದರಿಂದ ನಮ್ಮ ರೆವಿನ್ಯೂ ಲಾಸ್ ಆಗುತ್ತದೆ. ಇದನ್ನು ಮಾದಕಾರದ ಹಣ ಕಳೆದುಕೊಳ್ಳಬಾರದು, ರೆವಿನ್ಯೂ ಕಳೆದುಕೊಂಡು ಲುಕ್ಸಾನು ಮಾಡಿಕೊಳ್ಳಬಾರದು ಎಂದು ಕೆಲವು ಮಂದಿ ಪ್ರತಿಪಾದನೆ ಮಾಡಿದರು. ಅದರ ಹಿಂದಿನಿಂದ ಕೋಟ್ಯಾಂತರ ರೂಪಾಯಿ ಆದಾಯ ಸಿಕ್ಕಿದರೂ ಸಹ ಇಂಥಾ ಹಣದಿಂದ ನೇಷನ್ ಬಿಲ್ಡಪ್ ಮಾಡಿದರೂ ಅದು ಸುಖಕರವಾಗುವುದಿಲ್ಲ. ಅಂಥಾ ನೇಷನ್ ಬಿಲ್ಡಿಂಗ್ ಬೇಡ. ಹೆಂಡದ ಅಂಗಡಿಯನ್ನು ಇಡುವುದಕ್ಕೆ ಲೈಸನ್ಸ್ ಕೊಟ್ಟು ಹರಾಜು ಮಾಡಿ ಅದರಿಂದ ದುಡ್ಡು ಸಂಪಾದನೆ ಮಾಡಿದರೆ ಇತರ ಟ್ಯಾಕ್ಸೇಷನ್ ಕಡಿಮೆ ಆಗುತ್ತದೆ ಎಂದು ಕೆಲವರು ಹೇಳಿದರು. ಆದರೆ ಈ ಒಂದು ಅನೀತಿ ಅನ್ಯಾಯ ರೀತಿಯಿಂದ ಎಷ್ಟು ಸಂಪಾದನೆ ಮಾಡಿದರೂ ಅದು ಸುಖಕರವಾಗುವುದಿಲ್ಲ. ಯಾವ ರೀತಿಯಿಂದಲೂ ಅದರಿಂದ ಯಾರಿಗೂ ಸುಖವಾಗಿಲ್ಲ ಮತ್ತು ಸುಖವಾಗುವುದಿಲ್ಲ ಅನ್ಯಾಯದಿಂದ ಸಂಪಾದನೆ ಮಾಡುವುದು ಒಳ್ಳೆಯದಲ್ಲ. ಈ ಪ್ರೊಹಿಬಿಷನ್ ಬಿಲ್ Simple but important ಎಂದು ಮಾನ್ಯ ಮಿನಿಸ್ಟರ್ ರವರು ಹೇಳಿದ್ದಾರೆ. ಮತ್ತು ಅದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸದೆ ಪಾಸ್ ಮಾಡಬೇಕೆಂದು ಮಾಡಿದ್ದಾರೆ. ಆದರೆ ಇದು ಅಷ್ಟು ಸಿಂಪಲ್ ಅಲ್ಲ. ಇದು ಮೋಸ್ಟ್ ಇಂಪಾರ್ಟೆಂಟ್ ಬಿಲ್. ಇದರಲ್ಲಿ ಸಾಕಷ್ಟು ಮಹತ್ವರ ವಿಷಯ ಇದೆ. ಏತಕ್ಕೆಂದರೆ ಬೊಂಬಾಯಿ ಪರಿಯಾದಲ್ಲಿ ನಾನು ಇದನ್ನು ನೋಡಿದ್ದೇನೆ. ನನಗೆ ಇದರ ಅನುಭವ ಇದೆ. ಅಲ್ಲಿಯೂ ಸಹ ಅದು ಇಂದಿಗೂ ಸಕ್ಸೆಸ್ ಆಗಿಲ್ಲ. ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಎಜುಕೇಷನ್ ಇನ್ಸ್ಟಿಟ್ಯೂಷನ್‌ಗಳಲ್ಲಿ ಇದನ್ನು ಸಾಕಷ್ಟು ಪ್ರಚಾರಮಾಡಲು ಅವುಗಳಿಗೆ ಎನ್‌ಟ್ರಸ್ಟ್ ಮಾಡಬೇಕು. ಅದಕ್ಕೆ ಸಫಿಷಿಯೆಂಟ್ ಫಂಡ್ ಪ್ರೊವೈಡ್ ಮಾಡಿಕೊಡಬೇಕು. ಕಂಪಲ್ಸರಿ ಡ್ಯೂಟಿ ಮಾಡಿ ಅದನ್ನು ತೆಗೆದುಕೊಂಡು ರಾಷ್ಟ್ರದೊಳಗೆ ಎಜುಕೇಷನಲ್ ಇನ್ಸ್ಟಿಟ್ಯೂಷನ್‌ಗಳು ಏನಿವೆ ಅವುಗಳಿಗೆ ಇದನ್ನು ಸಹ ಒಪ್ಪಿಸುವುದು ಯೋಗ್ಯ ಧಾರ್ಮಿಕ ಸಂಸ್ಥೆಗಳಿಗೂ ಒಪ್ಪಿಸಬೇಕು. ಸೋಷಿಯಲ್ ಎಜುಕೇಷನಿಂದ ಹೆಚ್ಚು ಲಾಭವಾಗುತ್ತದೆ. ಇವೇ ಸಂಸ್ಥೆಗಳು ಈ ಕೆಲಸ ಮಾಡಲಿಕ್ಕೆ ಯೋಗ್ಯ. ಒಂದು ಕಾಯಿದೆಯನ್ನು ಪಾಸ್ ಮಾಡಿ ಅದನ್ನು ಅಮಲಿನಲ್ಲಿ ತಂದು ಕೇವಲ ಅದರಿಂದಲೇ ಯಶಸ್ವಿಯಾಗಿ ಸಮರ್ಥ ಮಾಡುತ್ತೇವೆಂದರೆ ಶಕ್ಯವಿಲ್ಲ. ಅದಕ್ಕೆ ಇಂಥ ಸಂಸ್ಥೆಗಳ ಮುಖಾಂತರ ಯಾವತ್ತು ಪ್ರೀಚಿಂಗ್ ಬೇಕು. ಇಂಥ ಸೋಷಿಯಲ್ ಪ್ರೀಚಿಂಗ್ ಮಾಡಿದರೂ ಸಹ ಒಂದೆರಡು ವರ್ಷವಲ್ಲ ಹತ್ತು ವರ್ಷ ಮಾಡಿದರೂ ಅದು ಸಹಜ ಆಗುವುದಿಲ್ಲ. ಕೆಳಗಿನ ಮಟ್ಟದಿಂದ ಪ್ರಚಾರ ಮಾಡಬೇಕು. ಆದ್ದರಿಂದ ಧಾರ್ಮಿಕ ಸಂಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳು ಏನಿವೆ ಅವು ಪ್ರೀಚಿಂಗ್ ಮಾಡುವುದಕ್ಕೆ ಮತ್ತು ಕಲಿಸುವುದಕ್ಕೆ ಯೋಗ್ಯ ಸಂಸ್ಥೆಗಳಾಗಿವೆ. ಆದ್ದರಿಂದ ಶಿಕ್ಷಣ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಈ ಕೆಲಸವನ್ನು ಅವುಗಳಿಗೆ obligatary duty ಎಂದು ವಹಿಸುವುದು ಒಳ್ಳೆಯದು. ಸರ್ಕಾರದ ಅಮಲಿನಲ್ಲಿ ಎನ್‌ಫೋರ್ಸ್‌ಮೆಂಟ್ ಮಾಡುವುದರಲ್ಲಿ ಏನಾದರೂ ಅನ್ಯಾಯ ಕಂಡುಬಂದರೆ ಆಗ ಸರ್ಕಾರದವರು ಅದನ್ನು ಯೋಗ್ಯ ಉಪಾಯಗಳಿಂದ ಆಗಿಂದಾಗ್ಗೆ ಸರಿಪಡಿಸಬೇಕು. ಈ ಪ್ರಕಾರ ಗ್ರಾಜುಯಲ್ ಆಗಿ ಮಾಡಬೇಕು. ಏಕದಂ ಒಂದೇ ಸಲ ಅದನ್ನು ಮಾಡುವುದಕ್ಕೆ ಶಕ್ಯವಿಲ್ಲ. ಗ್ರಾಜುಯಲ್ ಆಗಿ ಅದನ್ನು ಯಾವತ್ತೂ ಸದಾ ಪ್ರಚಾರ ಮಾಡುತ್ತಿರಬೇಕು.

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ದೇವತೆಗಳು ಸುರಾಪಾನ ಮಾಡುತ್ತಾರೆ ಎಂದು ಶ್ರೀ ಶ್ಯಾಮ್‌ಸುಂದರ್ ಅವರು ಹೇಳಿದರು. ಆ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ಡಿ. ಜೋತ್.—ಅದನ್ನು ಯಾರು ತಿಳಿಸಿದರೋ ಯಾರು ಅದನ್ನು ಪ್ರತಿಪಾದನೆ ಮಾಡಿದರೋ ಅವರೇ ಹೇಳಬಹುದು ನಾನು ಅದನ್ನು ಹೇಗೆ ಹೇಳಬಲ್ಲೆ ? ಅವರ ವಿಚಾರವನ್ನು ನಾನು ಹೇಳುವುದಕ್ಕೆ ಶಕ್ಯವಿಲ್ಲ. ಅದನ್ನು ಯಾರು ಹೇಳಿದರೋ ಅವರನ್ನೇ ನೀವು ಕೇಳಿಕೊಳ್ಳಿ. ಹೀಗೆ ಎಲ್ಲಾ ವಿಷಯಗಳನ್ನು ಸರ್ಕಾರದವರು ಲಕ್ಷ್ಯದಲ್ಲಿ ಇಟ್ಟು ಎನ್‌ಫೋರ್ಸ್‌ಮೆಂಟ್ ಮಾಡಬೇಕು. ಕಾಯಿದೆಯನ್ನು ಪಾಸ್ ಮಾಡಿದಾಕ್ಷಣ ಇದರ ಯಶಸ್ವಿಯಾಗುವುದಿಲ್ಲ. ರಾಷ್ಟ್ರದ ಉನ್ನತಿ ಆಗಬೇಕು. ಜನಗಳು ಆರೋಗ್ಯವಂತರಾಗಬೇಕು. ಹಣ, ಗುಣ, ನೀತಿ ನಡುವಳಿಕೆ ಎಲ್ಲರೂ ಸಂಪಾದನೆ ಮಾಡಬೇಕು. ಜನಗಳು ಮುಂದುವರಿಯಬೇಕು. ದೇಶದಲ್ಲಿಯ ಎಲ್ಲ ಕುಟುಂಬದ ಜನಗಳಿಗೆ ಸುಖ ಸಿಕ್ಕಬೇಕು. ಎಂಬುದು ನಿಮ್ಮ ಉದ್ದೇಶವಾಗಿದ್ದರೆ ಇದನ್ನು ಸರಿಯಾಗಿ ಜಾರಿಗೆ ತರುವುದರ ಮೇಲೆ ಅದು ಅವಲಂಬಿಸಿದೆ. ಪ್ರಾಮಾಣಿಕತೆಯಿಂದ ನಿಷ್ಠುರತನದಿಂದ ನಿರ್ದಾಕ್ಷಿಣ್ಯವಾಗಿ ಅದನ್ನು ಹತೋಟಿಮಾಡಿ ಪಾರ್ಟಿ ತನ್ನದು ನನ್ನದು ವಗೈರೆಯಾದ ಕನ್ಸಿಡರೇಷನ್ ಅನ್ನು ಗಣನೆಗೆ ತೆಗೆದುಕೊಳ್ಳದೆ ಈ ಕಾಯಿದೆಯನ್ನು ಅಮಲು ಮಾಡಬೇಕು. ಆದ್ದರಿಂದ ಒಂದಲ್ಲ ಹತ್ತು ಸಾರಿ ಎಷ್ಟೇ ವಿಘ್ನಗಳು ಬಂದರೂ, ಏನೇ ಆದರೂ ಹಿಂಜರಿಯಬೇಡಿ, ಧೈರ್ಯದಿಂದ ಮುಂದೆ ಸಾಗಿರಿ, ದೇಶದಲ್ಲಿ ಇಂಥಾ ಉತ್ತಮವಾದ, ಸುಂದರವಾದ ಬಿಲ್ಲಿನಿಂದ ಜನತೆಗೆ ಮಾರ್ಗದರ್ಶನ ಆಗುವ ಹಾಗೆ ಮಾಡಿ. ಈ ಪ್ರಕಾರ ನಮ್ಮ State ವೆಲ್‌ಫೇರ್ ಸ್ಟೇಟ್ ಆಗಬೇಕು ಎಂದು ತಿಳಿದು ಆ ರೀತಿ ಕಾಯಿದೆಯನ್ನು ಮಾಡಬೇಕೆಂದು ಸೂಚನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The House will now rise and meet to-morrow at 1 P.M.

The House adjourned at Six of the Clock to meet again at One of the Clock on Friday, the 25th August 1961.

WD 6611—GPB—500—(L. A. New)—19-3-67